ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ದಕ್ಷಿಣ ಆಫ್ರಿಕಾ ವಿರುದ್ಧ ಶುಕ್ರವಾರ ಆರಂಭವಾಗುವ ಮೊದಲ ಟೆಸ್ಟ್‌ಗೂ ಮುನ್ನ ನಾಯಕ ಶುಭಮನ್ ಗಿಲ್ ತಮ್ಮ ಕೌಶಲವನ್ನು ಹುರಿಗೊಳಿಸಲು ಶ್ರಮಹಾಕಿದರು.

12 ನವೆಂಬರ್ 2025 ಬುಧವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 242 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಆರಂಭ-ಅಂತ್ಯವಿಲ್ಲದ ಜೈಲಿನ ರಾಜ್ಯಾತಿಥ್ಯ » 2



ರಸ್ತೆ ಕಾಮಗಾರಿ ವಿಳಂಬಕ್ಕೆ ಅರಣ್ಯ ಇಲಾಖೆ ಕಾರಣ » 3



ದೆಹಲಿ ಸ್ಫೋಟ: ಎನ್‌ಐಎ ಹೆಗಲಿಗೆ ತನಿಖೆ ಹೊಣೆ » 4

# ಬಿಹಾರ: ಎನ್‌ಡಿಎಗೆ ಬಹುಮತದ ಹಾರ

## ಮತದಾನೋತ್ತರ ಸಮೀಕ್ಷೆ ಬಹಿರಂಗ | ಮೋದಿ-ನಿತೀಶ್ ಮ್ಯಾಜಿಕ್ ಫಲಿಸುವ ಭರವಸೆ

• ಪ್ರಜೋದಯ ವರದಿ

**ನವದೆಹಲಿ:** ದೇಶದ ಗಮನ ಸೆಳೆದಿರುವ ಬಿಹಾರ ವಿಧಾನಸಭೆ ಚುನಾವಣೆ ಮಂಗಳವಾರ ಮುಕ್ತಾಯಗೊಂಡಿದ್ದು, ಮತದಾನೋತ್ತರ ಸಮೀಕ್ಷೆಗಳೆಲ್ಲ ಎನ್‌ಡಿಎಗೆ ಬಹುಪರಾಕ್ ಹೇಳಿವೆ.

ಆ ಮೂಲಕ ಪ್ರಧಾನಿ ನರೇಂದ್ರ ಮೋದಿ ಹಾಗು ನಿತೀಶ್ ಕುಮಾರ್ ಅವರ ಜೋಡಿ ಕಮಾಲ್ ಮಾಡುವುದು ನಿಶ್ಚಿತ ಎನ್ನಲಾಗಿದೆ. ನ.11 ರಂದು 2ನೇ ಸುತ್ತಿನ ಮತದಾನ ಅಂತ್ಯವಾಗುತ್ತಿದ್ದಂತೆಯೇ ಹಲವಾರು ಚುನಾವಣಾ ವಿಶ್ಲೇಷಣಾ ಸಂಸ್ಥೆಗಳು, ತಾವು ನಡೆಸಿದ್ದ ಮತದಾರರ ಸಮೀಕ್ಷಾ ವರದಿಗಳನ್ನು ಬಿಡುಗಡೆ ಮಾಡಿವೆ. ಖ್ಯಾತ ಚುನಾವಣಾ ಸಮೀಕ್ಷಾ ಸಂಸ್ಥೆಯಾದ ಟುಡೇಸ್ ಚಾಣಕ್ಯ ಬಿಜೆಪಿ-ಜೆಡಿಯು ನೇತೃತ್ವದ ಎನ್‌ಡಿಎ ಮೈತ್ರಿಕೂಟವೇ ಅಧಿಕಾರಕ್ಕೆ ಬರುವುದಾಗಿ ಹೇಳಿದೆ. ಕಾಂಗ್ರೆಸ್-ಆರ್‌ಜೆಡಿ ನೇತೃತ್ವದ ಮಹಾಘಟ ಬಂಧನ್ ಮೈತ್ರಿಕೂಟವು ಕೇವಲ 100 ರಿಂದ 108 ಸೀಟುಗಳಿಗೆ ತೃಪ್ತಿಪಡಬೇಕಾಗುತ್ತದೆಂದು ತಿಳಿಸಿದೆ.

**ನಿತೀಶ್ ಮತ್ತೆ ಸಿಎಂ ನಿಶ್ಚಿತ**

ನಿತೀಶ್ ಕುಮಾರ್ ಅವರು ಮತ್ತೆ ಬಿಹಾರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುವುದು ಸ್ಪಷ್ಟವಾಗಿದೆ. ಈಗಾಗಲೇ ಎನ್‌ಡಿಎ ಮೈತ್ರಿಕೂಟವು ತನ್ನ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ನಿತೀಶ್ ಕುಮಾರ್ ಅವರನ್ನೇ ಘೋಷಿಸಿತ್ತು. ಮತದಾನೋತ್ತರ ವರದಿಯಲ್ಲಿ ಎನ್‌ಡಿಎಗೆ 130 ರಿಂದ 138 ಸೀಟುಗಳು ಬರುವುದಾಗಿ ಹೇಳಿದೆ. ಒಟ್ಟು 243 ವಿಧಾನಸಭಾ ಕ್ಷೇತ್ರಗಳಿದ್ದು, ಯಾವ ಪಕ್ಷಕ್ಕೆ ಅಥವಾ ಮೈತ್ರಿಕೂಟಕ್ಕೆ ಅಧಿಕಾರಕ್ಕೆ ಬರಲು 122 ಸೀಟುಗಳು ಬೇಕಿವೆ. ಹಾಗೆ ನೋಡಿದರೆ ಟುಡೇಸ್ ಚಾಣಕ್ಯ ಸಂಸ್ಥೆ ವರದಿ ಪ್ರಕಾರ ಎನ್‌ಡಿಎ ಮೈತ್ರಿಕೂಟವೇ ಅಧಿಕಾರಕ್ಕೆ ಬರುವುದು ನಿಶ್ಚಿತ ಎನ್ನಲಾಗಿದೆ. ಹಾಗಾಗಿ ಅವರನ್ನೇ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸಿರುವುದರಿಂದ ನಿತೀಶ್‌ಗೆ ಅಧಿಕಾರ ಸಿಗುವುದು ಖಚಿತವಾಗಿದೆ.



### ಮತದಾನೋತ್ತರ ಸಮೀಕ್ಷೆ ವಿವರ

| | ಎನ್‌ಡಿಎ | ಇಂಡಿಯಾ ಕೂಟ | ಇತರೆ |
|---|---|---|---|
| ಟುಡೇಸ್ ಚಾಣಕ್ಯ | 130 - 138 | 100- 108 | 3 - 5 |
| ದೈನಿಕ್ ಭಾಸ್ಕರ್ | 145 - 160 | 73 -91 | 5 -10 |
| ಮ್ಯಾಟ್ರೈಜ್‌ಐಎಎನ್‌ಎಸ್ | 147 -167 | 70 - 90 | 6 -10 |
| ಪೀಪಲ್ಸ್ ಪಲ್ಸ್ | 133 - 159 | 75 -101 | 2 - 8 |
| ಪೀಪಲ್ಸ್ ಇನ್ಸೈಟ್ | 133 - 148 | 85 - 102 | 5 -8 |
| ಟೈಮ್ಸ್ ನೌಜೆವಿಸಿ | 135 - 150 | 85 - 100 | 5 - 8 |
| ಪಿಮಾರ್ಕ್ | 142 -162 | 70 - 90 | 8 - 12 |
| ಎಬಿಪಿಸಿ ವೋಟರ್ | 133 - 148 | 85 - 102 | 5 - 8 |

### ಶೇ. 67 ರಷ್ಟು ಮತದಾನ

ಬಿಹಾರ ವಿಧಾನಸಭೆ ಚುನಾವಣೆಯ ಎರಡನೇ ಹಂತದ ಮತದಾನ ಮಂಗಳವಾರ ಪೂರ್ಣಗೊಂಡಿದ್ದು, ದಾಖಲೆಯ ಶೇ. 67.14 ರಷ್ಟು ಮತದಾನ ವಾಗಿದೆ. ಮೊದಲ ಹಂತದ ಮತದಾನ ನ.6 ರಂದು (ಶೇ. 65.05) ನಡೆದಿತ್ತು. ನ.14ಕ್ಕೆ ಫಲಿತಾಂಶ ಪ್ರಕಟವಾಗಲಿದೆ. 3.70 ಕೋಟಿ ಮತದಾರರನ್ನು ಒಳಗೊಂಡಿರುವ 122 ಕ್ಷೇತ್ರಗಳಲ್ಲಿ ಮಂಗಳವಾರ ಮತದಾನ ನಡೆದಿದೆ.

### ರಾಹುಲ್ ಭೇಟಿ-ಮುಂದುವರಿದ ಅನಿಶ್ಚಿತತೆ

ಬಿಹಾರ ವಿಧಾನಸಭೆ ಚುನಾವಣೆ ಫಲಿತಾಂಶ ಬಳಿಕ ರಾಜ್ಯ ಸಚಿವ ಸಂಪುಟ ಪುನಾರಚಣೆ ಹಾಗು ಮುಖ್ಯಮಂತ್ರಿ ಬದಲಾವಣೆ ವಿಚಾರಕ್ಕೆ ತಾರ್ಕಿಕ ಅಂತ್ಯ ಸಿಗುವ ಸಾಧ್ಯತೆ ಇದೆ ಎನ್ನಲಾಗಿತ್ತಾದರೂ ಅನಿಶ್ಚಿತೆ ಮುಂದುವರಿಯುವ ಸಾಧ್ಯತೆ ಇದೆ. ನ.15ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದೆಹಲಿಗೆ ಭೇಟಿ ನೀಡಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಲಿದ್ದಾರೆ ಎನ್ನಲಾಗಿತ್ತು. ಆದರೆ, ರಾಹುಲ್ ಗಾಂಧಿ ನ. 15ರಿಂದ 10 ದಿನ ವಿದೇಶ ಪ್ರವಾಸ ಕೈಗೊಂಡಿದ್ದಾರೆ. ಈ ಹಿನ್ನಲೆಯಲ್ಲಿ ರಾಜ್ಯ ನಾಯಕರಿಗೆ ದೆಹಲಿ ಪ್ರವಾಸ ಮುಂದೂಡುವಂತೆ ಹೈಕಮಾಂಡ್ ಸೂಚಿಸಿದೆ ಎನ್ನಲಾಗಿದೆ.

## ಚುನಾವಣೆ ವೇಳೆಯಲ್ಲೇ ಸ್ಫೋಟ: ಕೇಂದ್ರ ಉತ್ತರಿಸಲಿ ಎಂದ ಮುಖ್ಯಮಂತ್ರಿ ಸಿದ್ದರಾಮಯ್ಯ


• ಪ್ರಜೋದಯ ವರದಿ

**ಮೈಸೂರು:** ದೆಹಲಿಯ ಕೆಂಪುಕೋಟೆ ಬಳಿ ನಡೆದ ಸ್ಫೋಟದ ಬಗ್ಗೆ ಕೇಂದ್ರ ಸರ್ಕಾರವೇ ಸಮಗ್ರ ತನಿಖೆ ನಡೆಸಿ ಉತ್ತರಿಸಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವ ಕಾರಣಕ್ಕೂ ಸ್ಫೋಟಗಳು ಆಗಬಾರದು. ಅದರಿಂದ ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಾರೆ. ಚುನಾವಣೆ ವೇಳೆಯಲ್ಲೇ ಏಕೆ ಸ್ಫೋಟಗಳು ಹೆಚ್ಚು ಎಂಬ ಬಗ್ಗೆ ಕೇಂದ್ರವೇ ಉತ್ತರಿಸಬೇಕು. ಈ ಸ್ಫೋಟವು ಬಿಹಾರ ಚುನಾವಣೆಯಲ್ಲಿ ಬಿಜೆಪಿ ಮೇಲೆ ಋಣಾತ್ಮಕ ಪ್ರಭಾವ ಬೀರುವ ಸಾಧ್ಯತೆಯೇ ಹೆಚ್ಚೆಂದರು.

ಪಕ್ಷದ ಹಿರಿಯ ನಾಯಕ ಕಪಿಲ್ ಸಿಬಲ್ ಅವರ ಕಾರ್ಯಕ್ರಮದಲ್ಲಿ ಭಾಗವಹಿಸಲು ನ. 15 ರಂದು ದೆಹಲಿಗೆ ಹೋಗುತ್ತಿದ್ದೇನೆ. ಅವತ್ತೇ ವಾಪಾಸ್ ಬರುವ ಅಂದಾಜಿದೆ. ರಾಹುಲ್ ಗಾಂಧಿ ಭೇಟಿಗೆ ಸಮಯ ಕೋರಿದ್ದು, ಅವಕಾಶ ಸಿಕ್ಕರೆ ಹೈಕಮಾಂಡ್ ಭೇಟಿಯಾಗುತ್ತೇನೆಂದರು.

ಭಾರತ ಹಿಂದೂ ರಾಷ್ಟ್ರ ಎಂಬ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿಕೆಗೆ ಪ್ರತಿಕ್ರಿಯಿಸಿ ಭಾರತ ಬಹುತ್ವದ ಸಂಸ್ಕೃತಿಯುಳ್ಳ ದೇಶ. ಎಲ್ಲಾ ಧರ್ಮೀಯರು ನಮ್ಮಲ್ಲಿದ್ದಾರೆಂದರು. ಆರ್‌ಎಸ್‌ಎಸ್‌ನವರು ಮೊದಲು ದೇಶದಲ್ಲಿನ ಅಸಮಾನತೆ, ಅಸ್ಪೃಶ್ಯತೆ ಬಗ್ಗೆ ಮಾತನಾಡಲಿ ಎಂದು ಸಲಹೆ ನೀಡಿದರು.



ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಕಾಂಗ್ರೆಸ್‌ನತ್ತ ವಾಲಿರುವ ಕುರಿತು ಪ್ರತಿಕ್ರಿಯಿಸಿದ ಅವರು ಜಿ.ಟಿ. ದೇವೇಗೌಡ ಸೇರಿ ಯಾರನ್ನೂ ಪಕ್ಷಕ್ಕೆ ಆಹ್ವಾನಿಸುವುದಿಲ್ಲ. ಪಕ್ಷದ ಸಿದ್ಧಾಂತ ಒಪ್ಪಿ ಬರುವವರಿಗೆ ಬೇಡ ಎನ್ನುವುದಿಲ್ಲವೆಂದರು.

## ನ.15 ರಂದು ಅಡಗೂರಿನಲ್ಲಿ ರಕ್ತದಾನ ಶಿಬಿರ

• ಪ್ರಜೋದಯ ವರದಿ

**ಹಾಸನ:** ಕನ್ನಡ ರಾಜ್ಯೋತ್ಸವ ಅಂಗವಾಗಿ ನ.15ರ ಶನಿವಾರ ಬೇಲೂರು ತಾಲ್ಲೂಕಿನ ಅಡಗೂರು ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಬೃಹತ್ ರಕ್ತದಾನ ಶಿಬಿರ, ಆರೋಗ್ಯ ಉಚಿತ ತಪಾಸಣಾ ಶಿಬಿರ, ನೇತ್ರ ಹಾಗು ದೇಹದಾನ ನೋಂದಣಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬಸವ ಯೋಗ ಕೇಂದ್ರದ ಮುಖ್ಯಸ್ಥ ಚೇತನ್ ಗುರೂಜಿ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ರಕ್ತಕ್ಕೆ ಪರ್ಯಾಯ ಮಾರ್ಗಗಳಲಿಲ್ಲ. ಯಾವ ವಸ್ತುವನ್ನಾದರೂ ಕೃತಕವಾಗಿ ತಯಾರಿಸಬಹುದು. ಆದರೆ, ರಕ್ತ ಉತ್ಪಾದನೆ ಅಸಾಧ್ಯ. ಹಾಗಾಗಿ ಆರೋಗ್ಯವಂತರು ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡುವ ಮೂಲಕ ಕೊರತೆ ನೀಗಿಸಬೇಕು. ಅಪಘಾತ, ಹೆರಿಗೆ ಮತ್ತಿತರ ತುರ್ತು ಸಂದರ್ಭದಲ್ಲಿ ರಕ್ತದ ಅವಶ್ಯಕತೆ ಹೆಚ್ಚಿರುತ್ತದೆ. ನಮ್ಮ ದೇಶದಲ್ಲಿ ಬೇಡಿಕೆಗೆ ತಕ್ಕಂತೆ ರಕ್ತದ ಲಭ್ಯತೆ ಇಲ್ಲವೆಂದರು.



ಬಸವ ಯೋಗ ಕೇಂದ್ರ ಆರಂಭದಿಂದಲೂ ರಕ್ತದಾನದ ಮಹತ್ವ ಸಾರುತ್ತಾ ಅನೇಕ ಶಿಬಿರಗಳನ್ನು ಆಯೋಜಿಸಿದೆ. ನಾನು ಸಹ ಈ ವರೆಗೆ 99 ಬಾರಿ ರಕ್ತದಾನ ಮಾಡಿದ್ದು, ನ. 15 ರಂದು 100ನೇ ಬಾರಿಗೆ ರಕ್ತದಾನ ಮಾಡುತ್ತಿದ್ದೇನೆ. ಕನ್ನಡ ರಾಜ್ಯೋತ್ಸವ ಅಂಗವಾಗಿ ಹಮ್ಮಿಕೊಂಡಿರುವ ಈ ಕಾರ್ಯಕ್ರಮದಲ್ಲಿ 1 ಸಾವಿರ ಯೂನಿಟ್ ರಕ್ತ ಸಂಗ್ರಹ ಗುರಿ ಹೊಂದಿದ್ದೇವೆಂದರು.

ಕಾರ್ಯಕ್ರಮದಲ್ಲಿ ಧಾರವಾಡದ ಬಸವ ಮಹಾಮನೆಯ ಶ್ರೀ ಬಸವಾನಂದ ಸ್ವಾಮೀಜಿ, ತಿಪಟೂರು ತಾಲ್ಲೂಕು ಕೆರಗೋಡಿ ರಂಗಾಪುರ ಶ್ರೀಮಠದ ಗುರು ಪರದೇಶಿಕೇಂದ್ರ ಸ್ವಾಮೀಜಿ, ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ, ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಸೇರಿ ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ. ಅಂದು ಬೆಳಿಗ್ಗೆ 10 ರಿಂದ ಸಂಜೆ 4.30ರ ವರೆಗೆ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ಶಿಬಿರದಲ್ಲಿ ನೇತ್ರ ತಪಾಸಣೆಯನ್ನು ನಗರದ ಅಮ್ಮ ಕಣ್ಣಿನ ಆಸ್ಪತ್ರೆ, ದಂತ ತಪಾಸಣೆಯನ್ನು ವಿ ಕೇರ್ ಸೂಪರ್ ಡೆಂಟಲ್ ಆಸ್ಪತ್ರೆ, ಹೃದಯ ತಪಾಸಣೆಯನ್ನು ಮಣಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗು ಇಂಡಿಯಾನ ಆಸ್ಪತ್ರೆ, ಕೀಲು ಮತ್ತು ಮೂಳೆ ತಪಾಸಣೆಯನ್ನು ಮಹಾಲಕ್ಷ್ಮೀ ಮಂಜಪ್ಪ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಹಾಗು ಆಯುರ್ವೇದ ಚಿಕಿತ್ಸಾ ತಪಾಸಣೆಯನ್ನು ರಾಜೀವ್ ಆಯುರ್ವೇದ ಆಸ್ಪತ್ರೆಯವರು ಮಾಡಲಿದ್ದಾರೆ ಎಂದರು.

ಪತ್ರಕರ್ತರ ಸಂಘದ ಮಾಜಿ ಜಿಲ್ಲಾಧ್ಯಕ್ಷ ರವಿ ನಾಕಲಗೂಡು, ಡಾ|| ದಿನೇಶ್, ಭುವನೇಶ್, ರಘು ಪಾಳ್ಯ, ಲಕ್ಷ್ಮಣ ಕೀರ್ತಿ ಹಾಜರಿದ್ದರು.

# ಕಾಲಮಿತಿಯೊಳಗೆ ಅರ್ಜಿ ವಿಲೇವಾರಿಗೆ ಸಚಿವರ ಸೂಚನೆ

## ಚ.ರಾ.ಪಟ್ಟಣದಲ್ಲಿ ಜನ ಸ್ಪಂದನ ಸಭೆಗೆ ಸಾರ್ವಜನಿಕರ ದಂಡು | 786 ಅರ್ಜಿ ಸ್ವೀಕಾರ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಸಾರ್ವಜನಿಕರು ಸಲ್ಲಿಸುವ ಅರ್ಜಿಗಳನ್ನು ಕಾನೂನು ಚೌಕಟ್ಟಿನಲ್ಲಿ ನಿಗದಿತ ಸಮಯದಲ್ಲಿ ವಿಲೇವಾರಿ ಮಾಡಿ ನೆರವಾಗಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಸೂಚಿಸಿದರು.

ಪಟ್ಟಣದ ತಾಲ್ಲೂಕು ಕಚೇರಿ ಆವರಣದಲ್ಲಿ ಮಂಗಳವಾರ ಆಯೋಜಿಸಿದ್ದ ಜನಸ್ಪಂದನ ಹಾಗು ಸಾರ್ವಜನಿಕ ಅಹವಾಲು ಸ್ವೀಕಾರ ಸಭೆಯಲ್ಲಿ ಮಾತನಾಡಿದ ಅವರು, ಎಲ್ಲಾ ಅರ್ಜಿಗಳಿಗೂ ಒಂದೇ ರೂಪದಲ್ಲಿ ಪರಿಹಾರ ನೀಡಲು ಸಾಧ್ಯವಿಲ್ಲ. ಬೋರವೆಲ್‌ಗೆ ಸಂಬಂಧಿಸಿದ ಸಮಸ್ಯೆಗೆ ಶಾಸಕರ ವ್ಯಾಪ್ತಿಯಲ್ಲಿ ಪರಿಹಾರ ಕಂಡುಕೊಳ್ಳಬೇಕು. ಮನೆ ಮಂಜೂರು ಗ್ರಾಮ ಪಂಚಾಯಿತಿ ಸಮಿತಿ ಬರುತ್ತದೆ. ಸ್ವೀಕೃತವಾದ ಇಂತಹ ಅರ್ಜಿಗಳನ್ನು ಸಂಬಂಧಿಸಿದವರಿಗೆ ಕಳುಹಿಸಲಾಗುವುದೆಂದು ತಿಳಿಸಿದರು.

ಸ್ವೀಕಾರವಾದ ಅರ್ಜಿಗಳಲ್ಲಿ ಸಾಧ್ಯವಿರುವ ಕೆಲವು ಅರ್ಜಿಗಳಿಗೆ ಸ್ಥಳದಲ್ಲಿ ಪರಿಹಾರ ಒದಗಿಸಲಾಗುತ್ತದೆ. ಉಳಿದವುಗಳ ವಿಲೇವಾರಿಗೆ ಹೆಚ್ಚಿನ ಆದ್ಯತೆ ನೀಡಿ ಪರಿಹಾರ ಒದಗಿಸಬೇಕೆಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.



ಹೆಚ್ಚು ಅರ್ಜಿಗಳು ದುರಸ್ತಿಗೆ ಸಂಬಂಧಿಸಿದಂತೆ ಬರುತ್ತವೆ. ಕಳೆದ ಐದು ವರ್ಷಗಳಲ್ಲಿ ಕೇವಲ 500 ಪ್ರಕರಣ ದುರಸ್ತಿ ಮಾಡಲಾಗಿದೆ. 2025ರಲ್ಲಿ 25000 ಪ್ರಕರಣ ದುರಸ್ತಿಗೆ ಕ್ರಮವಹಿಸಿದ್ದು, ಈಗಾಗಲೇ 13 ರಿಂದ 14 ಸಾವಿರ ಅರ್ಜಿ ವಿಲೇವಾರಿ ಮಾಡಲಾಗಿದೆ. ನಕಾಶೆಯಲ್ಲಿ ರಸ್ತೆ ಇದ್ದರೆ ಮುಲಾಜಿಲ್ಲದೆ ತೆರವುಗೊಳಿಸಿ ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ದುರಸ್ತಿಯಾದ ನಂತರ ಇಂಡೀಕರಣ ಆಗಬೇಕು. ಅದರ ಬಗ್ಗೆ ಅರ್ಜಿಗಳು ಬರುತ್ತಿವೆ. ಅವುಗಳ ಬಗ್ಗೆ ಹೆಚ್ಚಿನ ಗಮನಹರಿಸಿ ಪಟ್ಟಿ ಮಾಡಿ ಎಂದು ಅಧಿಕಾರಿಗಳಿಗೆ ಸೂಚಿಸಿದ ಅವರು, ತಾಲ್ಲೂಕು ವಸತಿ ಪ್ರದೇಶಗಳಿಗೆ ಕುರಿತಂತೆ ದಾಖಲೆ ಇರುವುದು ಮತ್ತು ಇಲ್ಲದಿರುವ ಬಗ್ಗೆ ತಹಶೀಲ್ದಾರ್ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು ಪರಿಶೀಲನೆ ಮಾಡಬೇಕು. ಧಾರ್ಮಿಕ ದತ್ತಿ ಇಲಾಖೆಗೆ ಒಳಪಡುವ ದೇವಸ್ಥಾನದ ಜಾಗ ಬಂದೋಬಸ್ತ್ ಮಾಡಿಸಲು ಕ್ರಮವಹಿಸುವಂತೆ ತಿಳಿಸಿದರು.

ಸಾರ್ವಜನಿಕರು ಖುದ್ದು ಹಾಜರಾಗಿ ಮನವಿಗಳನ್ನು ನೀಡಲು ತೆರೆಯಲಾದ ಕೌಂಟರ್‌ಗಳಲ್ಲಿ ಅರ್ಜಿಗಳನ್ನು ದಾಖಲಿಸಿಕೊಂಡು ಟೋಕನ್ ನಂಬರ್ ಸ್ವೀಕರಿಸಿ ತಮ್ಮ ಅಹವಾಲನ್ನು ಸಲ್ಲಿಸಿದ್ದು, ಒಟ್ಟು 786 ಅರ್ಜಿಗಳನ್ನು ಸ್ವೀಕರಿಸಲಾಯಿತು.

ಸಂಸದ ಶ್ರೇಯಸ್ ಪಟೇಲ್, ಶಾಸಕ ಸಿ.ಎನ್.ಬಾಲಕೃಷ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಬ್ ಕುಮಾರ್, ಅಪರ ಜಿಲ್ಲಾಧಿಕಾರಿ ಮಂಜುನಾಥ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ, ಉಪ ವಿಭಾಗಾಧಿಕಾರಿಗಳಾದ ಜಗದೀಶ್ ಗಂಗಣ್ಣನವರ್, ರಾಜೇಶ್ ಹಾಗು ಇತರರಿದ್ದರು.

## ಅಜ್ಜಿ ಮನೆಯಲ್ಲಿ ಮೊಮ್ಮಗಳ ಅನುಮಾನಾಸ್ಪದ ಸಾವು

• ಪ್ರಜೋದಯ ವರದಿ

**ಹೊಳೆನರಸೀಪುರ:** ಮನೆಯ ಬಚ್ಚಲು ಕೋಣೆಯಲ್ಲಿ ಮಹಿಳೆಯ ಶವ ಮಂಗಳವಾರ ಬೆಳಿಗ್ಗೆ ಪತ್ತೆಯಾಗಿದ್ದು, ಆತ್ಮಹತ್ಯೆಯೋ ಅಥವಾ ಕೊಲೆಯೋ ಎಂಬ ಅನುಮಾನ ವ್ಯಕ್ತವಾಗಿದೆ.

ತಾಲ್ಲೂಕಿನ ತಟ್ಟೆಕೆರೆ ಬಾರೆಯ ಸೀತಮ್ಮ ಎಂಬುವವರ ಮೊಮ್ಮಗಳು ಸುಶ್ಮಿತಾ (26) ಮೃತ ದುರ್ದೈವಿ. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡಿದ್ದ ಸುಶ್ಮಿತಾ, ತಾಯಿ ಸುಮಿತ್ರಾ ಜೊತೆಗೆ ಅಜ್ಜಿ ಮನೆಯಲ್ಲೇ ವಾಸವಿದ್ದಳು. ಐದು ವರ್ಷಗಳ ಹಿಂದೆ ಚನ್ನರಾಯಪಟ್ಟಣ ತಾಲ್ಲೂಕು ಗೂಳಮಾರನಹಳ್ಳಿ ಗ್ರಾಮದ ರಾಜು ಎಂಬಾತನ ಜೊತೆ ವಿವಾಹ ಮಾಡಿಕೊಡಲಾಗಿತ್ತು.



**ಗಂಡ-ಹೆಂಡತಿ ನಡುವೆ ಜಗಳ**

ಮದುವೆಯಾದ ಹೊಸತರಲ್ಲಿ ದಾಂಪತ್ಯ ಜೀವನ ಚೆನ್ನಾಗಿಯೇ ಇತ್ತು. ದಂಪತಿಗೆ ಮೂರು ಗಂಡು ಮಕ್ಕಳಿದ್ದು, ಎರಡು ವರ್ಷಗಳಿಂದ ಸುಶ್ಮಿತಾ ಆರೋಗ್ಯದಲ್ಲಿ ವಿಪರೀತ ಏರುಪೇರು ಉಂಟಾಗಿತ್ತು. ಬುದ್ದಿಹೀನರಾಗಿದ್ದ ಸುಶ್ಮಿತಾ ಮೂರ್ಛೆ ರೋಗದಿಂದ ಬಳಲುತ್ತಿದ್ದರು. ಹಾಸನದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ನಿತ್ಯ ಮಾತ್ರೆ ಸೇವಿಸುತ್ತಿದ್ದರು. ಆಸ್ಪತ್ರೆ ಖರ್ಚು ಭರಿಸುವ ವಿಚಾರದಲ್ಲಿ ರಾಜು ಮತ್ತು ಸುಶ್ಮಿತಾ ನಡುವೆ ಗಲಾಟೆ ನಡೆಯುತ್ತಿತ್ತು. ಅದರಿಂದ ಮನಸ್ತಾಪಗೊಂಡಿದ್ದ ಮಹಿಳೆ ತಮ್ಮ ಮೂವರು ಮಕ್ಕಳನ್ನು ಅಜ್ಜಿ ಊರಾದ ತಟ್ಟೆಕೆರೆಗೆ ಬಿಟ್ಟು ಬಂದಿದ್ದರು. ಕೌಟುಂಬಿಕ ಕಲಹದಿಂದ ಸುಶ್ಮಿತಾ ಬೇಸರಗೊಂಡಿದ್ದರೆನ್ನಲಾಗಿದೆ.

ಗಂಡನ ಜೊತೆ ಜಗಳ ಮಾಡಿಕೊಂಡಿದ್ದ ಸುಶ್ಮಿತಾ ನ.9ರಂದು ತಟ್ಟೆಕೆರೆಯ ಅಜ್ಜಿ ಮನೆಗೆ ತೆರಳಿ ತನ್ನ ಕಿವಿಯೊಲೆಗಳನ್ನು ಕೊಡುವಂತೆ ಕೇಳಿದ್ದರು. ನಿನ್ನ ಮಕ್ಕಳನ್ನು ಸಾಕುವುದಕ್ಕಾಗಿ ಓಲೆ ಮಾರಿದ್ದೇನೆಂದು ಅಜ್ಜಿ ಸೀತಮ್ಮ ಹೇಳಿದ್ದರು. ಅದರಿಂದ ಆಕ್ರೋಶಗೊಂಡ ಸುಶ್ಮಿತಾ ಕೋಪದಲ್ಲಿ ವಾಪಾಸ್ಸಾಗಿದ್ದಳು. ಆದರೆ, ಮಂಗಳವಾರ ಬೆಳಿಗ್ಗೆ ಅಜ್ಜಿ ಮನೆಯ ಬಚ್ಚಲು ಕೋಣೆಯಲ್ಲಿ ಸುಶ್ಮಿತಾ ಮೃತದೇಹ ಪತ್ತೆಯಾಗಿರುವುದು ಆತಂಕ ಹುಟ್ಟಿಸಿದೆ. ಕೆನ್ನೆ, ಎಡಗೈ ಮತ್ತು ತುಟಿ ಮೇಲೆ ಗಾಯದ ಗುರುತುಗಳಿದ್ದು, ಪ್ರಕರಣ ಗೊಂದಲ ಮೂಡಿಸಿದೆ. ದೂರು ದಾಖಲಿಸಿಕೊಂಡಿರುವ ಗ್ರಾಮಾಂತರ ಠಾಣೆ ಪೊಲೀಸರು ತನಿಖೆ ಆರಂಭಿಸಿದ್ದಾರೆ.

## ನ.14 ರಂದು 72ನೇ ಅಖಿಲ ಭಾರತ ಸಹಕಾರ ಸಪ್ತಾಹ

• ಪ್ರಜೋದಯ ವರದಿ

**ಹಾಸನ :** ನಗರದ ಹೆಚ್‌ಡಿಸಿಸಿ ಬ್ಯಾಂಕ್‌ನ ಹೆಚ್.ಡಿ ದೇವೇಗೌಡ ರೈತ ಸಭಾಂಗಣದಲ್ಲಿ ನ.14 ರಂದು ಬೆ.9.30ಕ್ಕೆ 72ನೇ ಅಖಿಲ ಭಾರತ ಸಹಕಾರ ಸಪ್ತಾಹ -2025 ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಸಂಸದ ಶ್ರೇಯಸ್ ಎಂ. ಪಟೇಲ್, ಮಾಜಿ ಸಚಿವ ಹೆಚ್.ಡಿ.ರೇವಣ್ಣ, ವಿಧಾನ ಪರಿಷತ್ ಸದಸ್ಯ ಡಾ|| ಸೂರಜ್ ರೇವಣ್ಣ ಗೌರವಾನ್ವಿತ ಉಪಸ್ಥಿತಿ ವಹಿಸಲಿದ್ದಾರೆ. ಸಂಜೀವಿನಿ ಸಹಕಾರಿ ಆಸ್ಪತ್ರೆಯ ಅಧ್ಯಕ್ಷರೂ ಆದ ಶಾಸಕ ಹೆಚ್.ಪಿ.ಸ್ವರೂಪ್ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜು ಅವರು ಸಪ್ತಾಹ ಸಹಕಾರ ಧ್ವಜಾರೋಹಣ ನೆರವೇರಿಸಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ಸಹಕಾರ ಒಕ್ಕೂಟ ಅಧ್ಯಕ್ಷ ಎಸ್.ಎನ್.ಪ್ರಕಾಶ್ ಅವರು ಉತ್ತಮ ಸಹಕಾರ ಸಂಘಗಳನ್ನು ಸನ್ಮಾನ ಮಾಡಲಿದ್ದಾರೆ.

## ಸ್ಫೋಟ: ಮೃತ ಕುಟುಂಬಗಳಿಗೆ ತಲಾ 10 ಲಕ್ಷ ಪರಿಹಾರ

• ಪ್ರಜೋದಯ ವರದಿ

**ನವದೆಹಲಿ:** ಕೆಂಪು ಕೋಟೆ ಬಳಿ ಸಂಭವಿಸಿದ ಸ್ಫೋಟದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ 10 ಲಕ್ಷ ಪರಿಹಾರವನ್ನು ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಮಂಗಳ ವಾರ ಘೋಷಿಸಿದ್ದಾರೆ.

ಈ ಸ್ಫೋಟದಿಂದ ಶಾಶ್ವತವಾಗಿ ಅಂಗವಿಕಲರಾದವರಿಗೆ 5 ಲಕ್ಷ ಹಾಗೂ ಗಂಭೀರವಾಗಿ ಗಾಯಗೊಂಡವರಿಗೆ 2 ಲಕ್ಷ ಪರಿಹಾರ ವನ್ನು ದೆಹಲಿ ಸರ್ಕಾರ ಘೋಷಿಸಿದೆ. ದೆಹಲಿಯಲ್ಲಿ ನಡೆದ ದುರದೃಷ್ಟಕರ ಘಟನೆಯು ಇಡೀ ನಗರವನ್ನೇ ಆಘಾತಕ್ಕೆ ದೂಡಿದೆ. ಇಂತಹ ಕಷ್ಟದ ಸಮಯದಲ್ಲಿ ಸಂತ್ರಸ್ತ ಕುಟುಂಬಗಳ ಜತೆ ದೆಹಲಿ ಸರ್ಕಾರ ನಿಲ್ಲುತ್ತದೆ. ಈ ಘಟನೆಯಲ್ಲಿ ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಎಲ್ಲಾ ಕುಟುಂಬಗಳಿಗೆ ಈ ದುಃಖವನ್ನು ಭರಿಸುವ ಶಕ್ತಿ ದೇವರು ಕರುಣಿಸಲಿ. ಮೃತಪಟ್ಟವರಿಗೆ ನನ್ನ ಸಂತಾಪಗಳು ಎಂದು ಎಕ್ಸ್ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

ಗಂಭೀರವಾಗಿ ಗಾಯಗೊಂಡವರಿಗೆ 2 ಲಕ್ಷ ಪರಿಹಾರ ನೀಡಲಾಗುವುದು ಹಾಗೂ ಎಲ್ಲಾ ಗಾಯಾಳುಗಳಿಗೆ ಸರ್ಕಾರವು ಗುಣಮಟ್ಟದ ವೈದ್ಯಕೀಯ ಚಿಕಿತ್ಸೆಯನ್ನು ಒದಗಿಸುತ್ತದೆ ಎಂದರು. ಸದಾ ಜನದಟ್ಟಣೆಯಿಂದ ಕೂಡಿರುವ ಐತಿ ಹಾಸಿಕ ಕೆಂಪುಕೋಟೆಯ ಬಳಿ ಸಂಚಾರ ಸಿಗ್ನಲ್‌ನಲ್ಲಿ ಚಲಿಸುತ್ತಿದ್ದ ಕಾರಿನಲ್ಲಿ ಸೋಮವಾರ ಸಂಜೆ ಭಾರಿ ಸ್ಫೋಟ ಸಂಭವಿಸಿ 12 ಮಂದಿ ಮೃತ ಪಟ್ಟಿದ್ದಾರೆ. ಈ ದುರ್ಘಟನೆ ಬೆನ್ನಲ್ಲೇ ದೇಶದ ಪ್ರಮುಖ ನಗರಗಳಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ.

## ಜಾತಿವಾರು ಸಮೀಕ್ಷೆ : ನ.30ರವರೆಗೆ ಅವಕಾಶ

• ಪ್ರಜೋದಯ ವರದಿ

**ಬೆಂಗಳೂರು :** ವಿವಿಧ ಕಾರಣಗಳಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ (ಜಾತಿವಾರು ಸಮೀಕ್ಷೆ) ಭಾಗವಹಿಸಲು ಸಾಧ್ಯವಾಗದೇ ಇರುವವರು ನವೆಂಬರ್ 30ರವರೆಗೆ ಆನ್‌ಲೈನ್ ಮೂಲಕ ವಿವರಗಳನ್ನು ನಮೂದಿಸಬಹುದೆಂದು ಹಿಂದುಳಿದ ವರ್ಗಗಳ ಆಯೋಗ ತಿಳಿಸಿದೆ.

ಸಮೀಕ್ಷಕರು ಮನೆ-ಮನೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುವ ಕಾರ್ಯವು ಅ.31ಕ್ಕೆ ಅಂತ್ಯವಾಗಿತ್ತು. ಆನ್‌ಲೈನ್ ಮೂಲಕ ಜನರು ಸ್ವಯಂ ಮಾಹಿತಿ ದಾಖಲಿಸಲು ನ.10ರವರೆಗೆ ಆಯೋಗ ಅವಕಾಶ ನೀಡಲಾಗಿತ್ತು. ಇದೀಗ ಈ ಅವಧಿಯನ್ನು ವಿಸ್ತರಿಸಲಾಗಿದೆ. ಸಮೀಕ್ಷೆಯಲ್ಲಿ https://kscbcselfdeclaration.karnataka.gov.in ಲಿಂಕ್ ಮೂಲಕ ಭಾಗವಹಿಸಬಹುದು. ಜನರು ತಮ್ಮ ಮನೆಗೆ ನೀಡಲಾಗಿರುವ ಯುಎಚ್‌ಐಡಿ ಅಥವಾ ವಿದ್ಯುತ್ ಮೀಟರ್‌ನ ಆರ್‌ಆರ್ ಸಂಖ್ಯೆಯನ್ನು ಬಳಸಿಕೊಂಡು ಈ ಪೋರ್ಟಲ್‌ನಲ್ಲಿ ಮಾಹಿತಿ ತುಂಬಬಹುದೆಂದು ಆಯೋಗದ ಸದಸ್ಯ ಕಾರ್ಯದರ್ಶಿ ಕೆ.ಎ.ದಯಾನಂದ ತಿಳಿಸಿದ್ದಾರೆ.

### ರೈಲ್ವೆ ನಿಲ್ದಾಣ-ಪ್ರವಾಸಿ ತಾಣಗಳಲ್ಲಿ ತಪಾಸಣೆ | ಪಾರದರ್ಶಕ ತನಿಖೆಗೆ ಸಚಿವರ ಆಗ್ರಹ

# ದೆಹಲಿ ಸ್ಫೋಟ: ಜಿಲ್ಲಾದ್ಯಂತ ಭಾರೀ ಕಟ್ಟೆಚ್ಚರ

• ಪ್ರಜೋದಯ ವರದಿ

**ಹಾಸನ:** ಐತಿಹಾಸಿಕ ಕೆಂಪು ಕೋಟೆಯ ಮೆಟ್ರೋ ಸ್ಟೇಷನ್ ಬಳಿ ಸೋಮವಾರ ಸಂಭವಿಸಿದ ಪ್ರಬಲ ಕಾರು ಸ್ಫೋಟದಿಂದ ಎಚ್ಚೆತ್ತಿರುವ ಜಿಲ್ಲಾಡಳಿತ ಜನದಟ್ಟಣೆ ಪ್ರದೇಶ, ಪ್ರವಾಸಿ ತಾಣಗಳಲ್ಲಿ ಕಟ್ಟೆಚ್ಚರ ವಹಿಸಿದೆ.

ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಮಂಗಳವಾರ ನಗರದ ರೈಲ್ವೆ ನಿಲ್ದಾಣ, ಹೊಸ ಬಸ್ ನಿಲ್ದಾಣ, ಪಾರ್ಕಿಂಗ್ ಪ್ರದೇಶ, ಸಕಲೇಶಪುರ ಸೇರಿ ವಿವಿಧ ಬಸ್ ಹಾಗು ರೈಲ್ವೆ ನಿಲ್ದಾಣಗಳಲ್ಲಿ ಬಿಗಿ ತಪಾಸಣೆ ನಡೆಸಿದರು. ಶ್ವಾನದಳ ಹಾಗು ಮೆಟಲ್ ಡಿಟೆಕ್ಟರ್ ಜೊತೆ ಸೂಕ್ಷ್ಮ ಪರಿಶೀಲನೆ ನಡೆಸಲಾಯಿತು. ರೈಲ್ವೆ ನಿಲ್ದಾಣಕ್ಕೆ ಬರುವ ಪ್ರಯಾಣಿಕರ ಬ್ಯಾಗ್ ಹಾಗು ನಿಲ್ದಾಣ ವ್ಯಾಪ್ತಿಯಲ್ಲಿರುವ ಕಸದ ತೊಟ್ಟಿಗಳ ಶೋಧ ನಡೆಸಿದರು. ಕೇಂದ್ರ ಸರ್ಕಾರದ ಸೂಚನೆ ಹಿನ್ನಲೆಯಲ್ಲಿ ಜನನಿಬಿಡ ಪ್ರದೇಶದಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ.

**ಬೇಲೂರಿನಲ್ಲಿ ಕೈಕೊಟ್ಟಿರುವ ಡಿಟೆಕ್ಟರ್**

ಬೇಲೂರಿನ ಐತಿಹಾಸಿಕ ಚನ್ನಕೇಶವ ದೇವಾಲಯದಲ್ಲಿ ಅಳವಡಿಸಿರುವ ಮೆಟಲ್ ಡಿಟೆಕ್ಟರ್ ನಿಷ್ಕ್ರಿಯವಾಗಿರುವುದು ಆಡಳಿತ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ. ಪ್ರಮುಖ ದ್ವಾರದಲ್ಲಿರುವ ಸಿಸಿಟಿವಿ ಕ್ಯಾಮರಾ ಸಹ ಕಾರ್ಯ ನಿರ್ವಹಿಸುತ್ತಿಲ್ಲ. ನಿತ್ಯ ದೇವಾಲಯಕ್ಕೆ ನೂರಾರು ಪ್ರವಾಸಿಗರು ಬರುತ್ತಾರೆ. ಎಲ್ಲರ ಮೇಲೆ ನಿಗಾ ಇಡಬೇಕಾದ ಮೆಟಲ್ ಡಿಟೆಕ್ಟರ್ ಯಂತ್ರವೇ ಒಂದೂವರೆ ತಿಂಗಳಿಂದ ಕೆಟ್ಟು ನಿಂತಿರುವುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ. ಚನ್ನಕೇಶವ ದೇವಾಲಯ ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿದ್ದರೂ ಸೂಕ್ತ ಭದ್ರತೆ ಇಲ್ಲದೇ ಇಲ್ಲದಾಗಿದೆ. ದೇವಾಲಯದಲ್ಲಿ ಒಟ್ಟು ಮೂರು ಸಿಸಿಟಿವಿ ಕ್ಯಾಮರಾ ಅಳವಡಿಸಲಾಗಿದೆ. ಆದರೆ ಮುಖ್ಯ ದ್ವಾರದ ಬಳಿಯ ಸಿಸಿಟಿವಿ ಕೆಲಸ ಮಾಡುತ್ತಿಲ್ಲ. ಭದ್ರತೆ ವಿಚಾರದಲ್ಲಿ ಚನ್ನಕೇಶವಸ್ವಾಮಿ ದೇವಾಲಯ ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯ, ಶ್ರವಣಬೆಳಗೊಳ ಜೈನಮಠ ಸೇರಿ ವಿವಿಧ ಪ್ರವಾಸಿ ತಾಣಗಳಲ್ಲಿ ಭದ್ರತೆ ಹೆಚ್ಚಿಸಲಾಗಿದೆ.



### ಎಲ್ಲಾ ಆಯಾಮದಿಂದಲೂ ತನಿಖೆ ಆಗಲಿ: ಸಚಿವ ಕೃಷ್ಣಬೈರೇಗೌಡ



ದೆಹಲಿ ಬಾಂಬ್ ಸ್ಫೋಟ ಪ್ರಕರಣವನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಪಾರದರ್ಶಕ ತನಿಖೆ ಮೂಲಕ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಆಗ್ರಹಿಸಿದರು.

ಚನ್ನರಾಯಪಟ್ಟಣದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾರು ಸ್ಫೋಟದಲ್ಲಿ ಒಂಬತ್ತು ಜನರು ಮೃತಪಟ್ಟಿದ್ದಾರೆ. ಮೃತರ ಕುಟುಂಬಸ್ಥರಿಗೆ ನೋವು ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಗಾಯಾಳುಗಳು ಬೇಗ ಗುಣಮುಖರಾಗಲೆಂದು ಆಶಿಸಿದರು.

ಈ ವಿಚಾರವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಸೂಕ್ಷ್ಮ ತನಿಖೆ ಮಾಡಿ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡುವುದರ ಜೊತೆಗೆ ನ್ಯಾಯ ಕೊಡುವ ಕೆಲಸವನ್ನುಕೇಂದ್ರ ಸರ್ಕಾರ ಮಾಡಬೇಕು. ಈ ತರಹದ ದುರ್ಘಟನೆಗಳು ನಡೆಯಬಾರದು. ಅವಘಡ ತಡೆಯುವಲ್ಲಿ ಲೋಪವಾಗಿದೆಯೇ ಎಂಬುದರ ಕುರಿತು ತನಿಖೆ ಆಗಬೇಕು. ದುಷ್ಕೃತ್ಯ ಎಸಗಿರುವವರು ಯಾರೇ ಆಗಿದ್ದರೂ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

**ರೈಲ್ವೆ ನಿಲ್ದಾಣಗಳಲ್ಲಿ ಅಲರ್ಟ್**

ಹಾಸನ, ಸಕಲೇಶಪುರ, ಚನ್ನರಾಯಪಟ್ಟಣ, ಅರಸೀಕೆರೆ, ಹೊಳೆನರಸೀಪುರ ರೈಲ್ವೆ ನಿಲ್ದಾಣಗಳಲ್ಲಿ ಬಿಗಿ ತಪಾಸಣೆ ಕೈಗೊಳ್ಳಲಾಯಿತು. ಸೋಮವಾರ ರಾತ್ರಿಯೇ ಕಾರ್ಯಾಚರಣೆ ಪ್ರಾರಂಭಿಸಿದ ಅಧಿಕಾರಿ ಹಾಗು ಸಿಬ್ಬಂದಿ ಪ್ರತಿಯೊಬ್ಬರನ್ನು ತಪಾಸಣೆಗೆ ಒಳಪಡಿಸಿದರು.

## ಕೇಂದ್ರ ಸ್ಥಾನದಲ್ಲಿ ವಾಸಿಸದ ಅಧಿಕಾರಿಗಳ ವಿರುದ್ಧ ಕ್ರಮ : ಸಿ.ಎಂ.

• ಪ್ರಜೋದಯ ವರದಿ

**ಬೆಂಗಳೂರು :** ಎಲ್ಲಾ ಅಧಿಕಾರಿಗಳು ಇನ್ನೂ ಮುಂದೆ ತಾವು ನಿರ್ವಹಿಸಿದ ಕೆಲಸ, ಎಲ್ಲಿಗೆ ಭೇಟಿ ನೀಡಲಾಗಿತ್ತು. ಅಲ್ಲಿ ಏನು ಸೂಚನೆ ನೀಡಲಾಗಿದೆ ಎಂಬ ಬಗ್ಗೆ ಡೈರಿ ಬರೆಯಲು ಆದೇಶಿಸಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಮಂಗಳವಾರ ಬೆಳಿಗ್ಗೆ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಸರ್ಕಾರಿ ಅಧಿಕಾರಿಗಳು ಯಾವುದೇ ಇಲಾಖೆಯಾದರೂ ಕೇಂದ್ರ ಸ್ಥಾನದಲ್ಲೇ ವಾಸಿಸಬೇಕು, ತಾಲ್ಲೂಕು ಮತ್ತು ಪಂಚಾಯತ್ ಮಟ್ಟದಲ್ಲಿ ಕೆಲಸ ಮಾಡುವವರು ಜಿಲ್ಲಾಮಟ್ಟದಲ್ಲಿ ನೆಲೆಸುವುದು, ತಾಲ್ಲೂಕು ಹಾಗೂ ಗ್ರಾಮಗಳಿಗೆ ಪ್ರತಿನಿತ್ಯ ಸಂಚರಿಸುವುದು ಸರಿಯಲ್ಲ. ಕೇಂದ್ರ ಸ್ಥಾನದಲ್ಲೇ ವಾಸಿಸಬೇಕು ಮತ್ತು ಕಚೇರಿಯಲ್ಲಿ ಹಾಜರಿದ್ದು, ಜನರ ಸಮಸ್ಯೆ ಸ್ಪಂದಿಸಬೇಕು. ಕೇಂದ್ರ ಸ್ಥಾನದಲ್ಲಿ ವಾಸವಿಲ್ಲದ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ವರದಿ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

E-mail : prajodayahsn@gmail.com

ಪ್ರಜೋದಯ

# ಆರಂಭ-ಅಂತ್ಯವಿಲ್ಲದ ಜೈಲಿನ ರಾಜಾತಿಥ್ಯ

■ ವಿಕೃತ ಕಾಮಿ ಉಮೇಶ್ ರೆಡ್ಡಿ ಮೊಬೈಲ್ ಹಿಡಿದು ಸೆಲ್‌ನಲ್ಲಿಯೇ ಮಾತನಾಡುತ್ತಿರುವುದು, ಐಸಿಸ್ ಜತೆ ನಂಟು ಹೊಂದಿದ್ದ ಉಗ್ರನೊಬ್ಬ ಆರಾಮಾಗಿ ವಿಡಿಯೋಗಳನ್ನು ನೋಡಿಕೊಂಡು, ಫೋನ್‌ನಲ್ಲಿ ಮಾತನಾಡುತ್ತಿರುವುದು ಮುಂತಾದ ದೃಶ್ಯಗಳು ಪರಪ್ಪನ ಅಗ್ರಹಾರ ಜೈಲಿನಿಂದ ವೈರಲ್ ಆಗುತ್ತಿದ್ದಂತೆ, ಜೈಲಿನಲ್ಲಿ ಸಿಗುತ್ತಿರುವ ರಾಜಾತಿಥ್ಯದ ವಿಷಯ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ.

ಸೆರೆಮನೆಯ ಕಲ್ಪನೆಗೆ ಶತಮಾನದ ಇತಿಹಾಸವಿದೆ. ತಪ್ಪು ಮಾಡಿದವರನ್ನು ಶಿಕ್ಷಿಸಲು ಒಬ್ಬೊಬ್ಬರು ಒಂದೊಂದು ರೀತಿಯ ಸೆರೆಮನೆಗಳನ್ನು ನಿರ್ಮಿಸಿರುವ ಹತ್ತಾರು ಉದಾಹರಣೆಗಳಿವೆ. ರಾಜ-ಮಹಾರಾಜರ ಕಾಲದಲ್ಲಿ ಈ ಜೈಲುಗಳನ್ನು ಭೂಗತ ಸ್ವರೂಪದಲ್ಲಿ ಸಿದ್ಧಪಡಿಸುತ್ತಿದ್ದರು. ಆದರೆ ಕಾಲ ಬದಲಾದಂತೆ, ಜೈಲುಗಳ ಸ್ವರೂಪವೂ ಬದಲಾಗಿದೆ. ಆಧುನಿಕ ಜೈಲುಗಳಲ್ಲಿ ಹೂದೋಟ, ಯೋಗ ಕೇಂದ್ರ, ಗ್ರಂಥಾಲಯ ಸೇರಿದಂತೆ ಹಲವು ಸೌಲಭ್ಯಗಳನ್ನು ನೀಡಲಾಗುತ್ತದೆ.

ಇದರೊಂದಿಗೆ ಕೌಶಲಾಭಿವೃದ್ಧಿಗೆ ಬೇಕಿರುವ ತರಬೇತಿಯನ್ನು ನೀಡುವುದನ್ನು ನೋಡಿದ್ದೇವೆ. ಇದಕ್ಕೆ ಯಾರ ತಕರಾರೂ ಇಲ್ಲ. ಆದರೆ ಈ ಅಧಿಕೃತ ಸೌಲಭ್ಯಗಳನ್ನು ಮೀರಿ ನೀಡುವ ರಾಜಾತಿಥ್ಯಕ್ಕೆ ಕೊನೆಯೆಂದು ಎನ್ನುವುದು ಹಲವರ ಪ್ರಶ್ನೆಯಾಗಿದೆ. ಕಳೆದೊಂದು ವಾರದಿಂದ ಚರ್ಚೆಯಾಗುತ್ತಿರುವ ವಿಷಯವೆಂದರೆ, ಈ ಎಲ್ಲ ಕನಿಷ್ಠ ಸೌಲಭ್ಯ ಮೀರಿ, ಅಕ್ರಮ ರೀತಿಯಲ್ಲಿ ಸೌಲಭ್ಯಗಳನ್ನು ನೀಡಿರುವುದು.

ಇದೇ ಈಗ ವಿವಾದಕ್ಕೆ ಕಾರಣವಾಗಿದೆ. ವಿಕೃತ ಕಾಮಿ ಉಮೇಶ್ ರೆಡ್ಡಿ ಮೊಬೈಲ್ ಹಿಡಿದು ಸೆಲ್‌ನಲ್ಲಿಯೇ ಮಾತನಾಡುತ್ತಿರುವುದು, ಐಸಿಸ್ ಜತೆ ನಂಟು ಹೊಂದಿದ್ದ ಉಗ್ರನೊಬ್ಬ ಆರಾಮಾಗಿ ವಿಡಿಯೋಗಳನ್ನು ನೋಡಿಕೊಂಡು, ಫೋನ್‌ನಲ್ಲಿ ಮಾತನಾಡುತ್ತಿರುವುದು ಮುಂತಾದ ದೃಶ್ಯಗಳು ಪರಪ್ಪನ ಅಗ್ರಹಾರ ಜೈಲಿನಿಂದ ವೈರಲ್ ಆಗುತ್ತಿದ್ದಂತೆ, ಜೈಲಿನಲ್ಲಿ ಸಿಗುತ್ತಿರುವ ರಾಜಾತಿಥ್ಯದ ವಿಷಯ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ಈ ಹಿಂದೆ ದರ್ಶನ್ ಆಂಡ್ ಗ್ಯಾಂಗ್ ಅನುಭವಿಸಿದ್ದ ರಾಜಾತಿಥ್ಯದ ಬಳಿಕ ಈ ವಿಡಿಯೋಗಳು ಬಹಿರಂಗ ವಾಗಿರುವುದು ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿರುವುದಂತೂ ಸತ್ಯ.

ಜೈಲಿನಲ್ಲಿ ಈ ರೀತಿ ಅಕ್ರಮವಾಗಿ ರಾಜಾತಿಥ್ಯ ಸಿಗುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ಓಪನ್ ಸೀಕ್ರೆಟ್. ಜೈಲಿನಿಂದ ಹೊರಗಡೆ ಸಕ್ರಮವಾಗಿ ಸಿಗುವ ಎಲ್ಲ ವಸ್ತುಗಳು ಅಕ್ರಮವಾಗಿ ಜೈಲಿನ ಗೋಡೆಯೊಳಗೆ ಸಿಗುತ್ತವೆ. ಆದರೆ ಅದಕ್ಕೆ ಇಂತಿಷ್ಟು ಅಂತ ಪಾವತಿಸಬೇಕಷ್ಟೇ!

ಆಗಾಗ್ಗೆ ಜೈಲುಗಳ ಮೇಲೆ ನಡೆಯುವ ದಾಳಿಯಲ್ಲಿ ಎಣ್ಣೆ, ಸಿಗರೇಟ್, ಮೊಬೈಲ್ ಅಷ್ಟೇ ಏಕೆ ಗಾಂಜಾ, ಅಫೀಮು ಸಿಕ್ಕಿರುವ ಹತ್ತಾರು ಉದಾಹರಣೆ ಇವೆ. ಆದರೆ ಈ ಎಲ್ಲ ವಿಷಯಗಳು ಗೌಪ್ಯವಾಗಿ ನಡೆಯುವ ಕಾರ್ಯಾಚರಣೆಯಷ್ಟೇ. ಈ ರೀತಿಯ ಅಕ್ರಮಗಳನ್ನು ತಡೆಗಟ್ಟಲು ದಶಕಗಳಿಂದ ಹತ್ತು ಹಲವು ಅಧಿಕಾರಿಗಳು ನಿರಂತರ ಪ್ರಯತ್ನ ನಡೆಸುತ್ತಿದ್ದಾರೆ.

ಈ ರೀತಿಯ ಪ್ರಯತ್ನ ನಡೆಸಿದ ಅಧಿಕಾರಿಗಳು ಬದಲಾದರೇ (ವರ್ಗ) ಹೊರತು ಜೈಲಿನಲ್ಲಿರುವ ವ್ಯವಸ್ಥೆ ಬದಲಾಗಿಲ್ಲ ಎನ್ನುವುದು ವಾಸ್ತವ. ಕಳೆದೊಂದು ವರ್ಷದಲ್ಲಿ ನಿರಂತರವಾಗಿ ಪರಪ್ಪನ ಅಗ್ರಹಾರ ಜೈಲಿನಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ ಸಾಕ್ಷ್ಯ ಸಮೇತ ಮಾಹಿತಿ ಸಿಗುತ್ತಿದೆ. ಆದರೆ ಸಾಕ್ಷ್ಯವೇ ಸಿಗದಂತೆ ರಾಜ್ಯದ ಹಲವು ಜೈಲುಗಳಲ್ಲಿ ನಡೆಯುವ ಅಕ್ರಮಕ್ಕೆ ಹೊಣೆ ಯಾರು? ಎನ್ನುವುದಕ್ಕೆ ಉತ್ತರವಿಲ್ಲ.

ಜೈಲಿನಲ್ಲಿ ರಾಜಾತಿಥ್ಯ ನೀಡಲಾಗುತ್ತಿದೆ ಎನ್ನುವ ಸುದ್ದಿ ಪ್ರಕಟವಾದ ಒಂದು ವಾರ ರಾಜ್ಯದ ಬಹುತೇಕ ಕಾರಾಗೃಹಗಳಲ್ಲಿ ತಪಾಸಣೆ ಮಾಡಲು ಅಧಿಕಾರಿಗಳು ಮುಂದಾಗುತ್ತಾರೆ. ಬ್ಯಾರಕ್‌ಗಳಲ್ಲಿ ತಪಾಸಣೆ ನಡೆಸಿದಾಗ ಕೆಲವೊಮ್ಮೆ ಅಕ್ರಮವಾಗಿ ಸಂಗ್ರಹಿಸಿಟ್ಟು ಕೊಂಡಿರುವ ವಸ್ತುಗಳು ಸಿಗುತ್ತವೆ. ಆದರೆ ಬಹುತೇಕ ಸಮಯದಲ್ಲಿ ತಪಾಸಣೆ ನಡೆಸುವ ಅಧಿಕಾರಿಗಳು ಖಾಲಿ ಕೈಯಲ್ಲಿ ವಾಪಸಾಗುವುದನ್ನು ನೋಡಿದ್ದೇವೆ.

ಒಳಗೆ ನಡೆಯುತ್ತಿರುವ ಅಕ್ರಮದ ಬಗ್ಗೆ ಸ್ಪಷ್ಟ ಮಾಹಿತಿ ಮೇರೆಗೆ ದಾಳಿ ನಡೆಸಿದರೂ, ತಪಾಸಣೆ ಸಮಯದಲ್ಲಿ ಏನೂ ಸಿಗದಿರುವುದಕ್ಕೆ ಕಾರಣ ಜೈಲಿನಲ್ಲಿರುವ ವ್ಯವಸ್ಥಿತ ನೆಟ್‌ವರ್ಕ್.




ಈ ನೆಟ್‌ವರ್ಕ್ ಅನ್ನು ಭೇದಿಸಿ, ಕಾರ್ಯಾಚರಣೆ ನಡೆಸುವಲ್ಲಿ ಬಹುತೇಕ ಅಧಿಕಾರಿಗಳು ವಿಫಲರಾಗುತ್ತಾರೆ.

ವಿಕೃತ ಕಾಮಿ ಉಮೇಶ್ ರೆಡ್ಡಿ, ಲಷ್ಕರ್ ಎ ತೋಯ್ಬಾ ಸಂಘಟನೆಯ ಉಗ್ರ ಜುಹಾದ್ ಹಮೀದ್ ಶಕೀಲ್ ಫೋನ್ ಬಳಸುತ್ತಿರುವ ವಿಡಿಯೋ ಹೊರಬರುತ್ತಿದ್ದಂತೆ ಪ್ರತಿಪಕ್ಷ ನಾಯಕರು ಸರಕಾರವನ್ನು ಪ್ರಶ್ನಿಸುತ್ತಿದ್ದಾರೆ. ಸರಕಾರ ಸತ್ತು ಹೋಗಿದೆ ಎನ್ನುವ ಮಾತನ್ನು ಆಡುತ್ತಿದ್ದಾರೆ.

ಆದರೆ ವಾಸ್ತವದಲ್ಲಿ ನೋಡುವುದಾದರೆ, ಯಾವುದೇ ಸರಕಾರ ಅಧಿಕಾರದಲ್ಲಿದ್ದರೂ ಈ ವ್ಯವಸ್ಥೆಯನ್ನು ಸರಿಪಡಿಸಲು ಸಾಧ್ಯವಾಗುವುದಿಲ್ಲ. ವ್ಯವಸ್ಥೆಯನ್ನು ಸರಿಪಡಿಸದಿರುವುದಕ್ಕೆ ಭ್ರಷ್ಟ ವ್ಯವಸ್ಥೆ ಒಂದು ಕಾರಣವಾದರೆ, ಸಿಬ್ಬಂದಿಗಳ ಕೊರತೆ ಮತ್ತೊಂದು ಕಾರಣ ಎಂದರೆ ತಪ್ಪಾಗುವುದಿಲ್ಲ. ರಾಜ್ಯ, ಕೇಂದ್ರ ಸರಕಾರಗಳು ಕಾರಾಗೃಹಗಳ ಮೇಲಿನ ಒತ್ತಡವನ್ನು ನಿವಾರಿಸಲು ಹಲವು ಕ್ರಮಗಳನ್ನು ಕಾಗದದಲ್ಲಿ ವಹಿಸಿದೆ.

ಹೊಸ ಕಾರಾಗೃಹ ನಿರ್ಮಾಣಕ್ಕೆ ಅನುದಾನವನ್ನು ನೀಡಿವೆ. ಆದರೆ ಈ ಎಲ್ಲಕ್ಕಿಂತ ಮುಖ್ಯವಾಗಿ ಬೇಕಿರುವ ಸಿಬ್ಬಂದಿಗಳನ್ನು ನೇಮಿಸಿಕೊಳ್ಳುವಲ್ಲಿ ಸರಕಾರಗಳು ವಿಫಲವಾಗುತ್ತಲೇ ಬಂದಿವೆ. ಸಚಿವ ಪರಮೇಶ್ವರ್ ಅವರು, ಹೊಸದಾಗಿ ನೇಮಿಸಿಕೊಳ್ಳಲು ಅನುಮತಿ ನೀಡಲಾಗಿದೆ ಎಂದು ಸೋಮವಾರದ ಸಭೆಯಲ್ಲಿ ಹೇಳಿದ್ದಾರೆ. ಆದರೆ ಶೇ.50ರಷ್ಟು ಹುದ್ದೆಗಳು ಖಾಲಿಯಿರುವಾಗ ಏಕಾಏಕಿ ನೇಮಕ ಹೇಗೆ ಸಾಧ್ಯ ಎನ್ನುವುದು ಹಲವರ ಪ್ರಶ್ನೆಯಾಗಿದೆ.

ಕಾರಾಗೃಹದಲ್ಲಿ ಕೈದಿಗಳ ಸಂಖ್ಯೆ ಹೆಚ್ಚಾಗುತ್ತಿದ್ದರೂ, ಸಿಬ್ಬಂದಿಗಳ ಸಂಖ್ಯೆ ಏರುತ್ತಿಲ್ಲ ಎನ್ನುವ ಆರೋಪ ಕಳೆದ ಹಲವು ವರ್ಷಗಳಿಂದ ಚಾಲ್ತಿಯಲ್ಲಿದೆ. ಕೇಂದ್ರ ಸರಕಾರ ಬಿಡುಗಡೆಗೊಳಿಸಿರುವ ಅಂಕಿ-ಅಂಶದ ಪ್ರಕಾರ, ಕರ್ನಾಟಕ ಮಾತ್ರವಲ್ಲದೇ ಇಡೀ ದೇಶದಲ್ಲಿ ಈ ಸಮಸ್ಯೆಯಿದೆ.

ದೇಶದಲ್ಲಿ ಒಟ್ಟು 152 ಕೇಂದ್ರ ಕಾರಾಗೃಹಗಳಿದ್ದು, ಅವುಗಳಲ್ಲಿ 1,90,416 ಪುರುಷ, 7675 ಮಹಿಳಾ ಕೈದಿಗಳು ಸೇರಿದಂತೆ ಒಟ್ಟು 198,150 ಕೈದಿಗಳನ್ನು ಬಂಧಿಸಿಟ್ಟುಕೊಳ್ಳುವುದಕ್ಕೆ ಅವಕಾಶವಿದೆ. ಆದರೆ ಅದೇ ಅಂಕಿ-ಅಂಶದ ಪ್ರಕಾರ 2023ರ ಅಂತ್ಯಕ್ಕೆ ಈ ಎಲ್ಲ ಕಾರಾಗೃಹಗಳಲ್ಲಿ 232,294 ಪುರುಷ, 6772 ಮಹಿಳೆಯರು ಸೇರಿದಂತೆ ಒಟ್ಟು 239,136 ರಷ್ಟು ವಿವಿಧ ಪ್ರಕರಣಗಳ ಕೈದಿಗಳಿದ್ದಾರೆ.

ಅಂದರೆ ಸಾಮರ್ಥ್ಯಕ್ಕಿಂತ ಶೇ.120ರಷ್ಟು ಹೆಚ್ಚು ಮಂದಿ ಕೈದಿಗಳು ಒಳಗಿದ್ದಾರೆ. ಅದರಲ್ಲಿ ಹಿಳೆಯರ ಬ್ಯಾರಕ್ ನಲ್ಲಿ ನಿಗದಿತ ಪ್ರಮಾಣಕ್ಕಿಂತ ಕಡಿಮೆ ಕೈದಿಗಳಿದ್ದಾರೆ. ಆದರೆ ಪುರುಷರ ಬ್ಯಾರಕ್‌ಗಳಲ್ಲಿ ಹೆಚ್ಚುವರಿ ಶೇ.122ರಷ್ಟು ಕೈದಿಗಳನ್ನು ಕೂಡಿ ಹಾಕಲಾಗಿದೆ.

ಕರ್ನಾಟಕದ ಮಟ್ಟಿಗೆ ನೋಡುವುದಾದರೆ, ರಾಜ್ಯದಲ್ಲಿ ಒಟ್ಟು ಎಂಟು ಕಾರಾಗೃಹಗಳಿದ್ದು, ಅವುಗಳಲ್ಲಿ 7855 ಪುರುಷ, 492 ಮಹಿಳಾ ಹಾಗೂ 10 ತೃತೀಯ ಲಿಂಗಿ ಕೈದಿಗಳು ಸೇರಿದಂತೆ ಒಟ್ಟು 8357 ಮಂದಿ ಇರಲು ಅವಕಾಶವಿದೆ. ಆದರೆ 2023ರ ಅಂಕಿ-ಅಂಶದ ಪ್ರಕಾರ ರಾಜ್ಯದ ಕಾರಾಗೃಹಗಳಲ್ಲಿ 9530 ಪುರುಷ, 336 ಮಹಿಳೆ ಸೇರಿದಂತೆ ಒಟ್ಟು 9866 ಕೈದಿಗಳು ಅಂದರೆ, ಶೇ.118ರಷ್ಟು ಹೆಚ್ಚುವರಿ ಕೈದಿಗಳನ್ನು ಬಂಧಿಸಿಡಲಾಗಿದೆ.

ಇನ್ನು ಪರಪ್ಪನ ಅಗ್ರಹಾರ ಜೈಲಿನ ಬಗ್ಗೆ ನೋಡುವುದಾದರೆ, ಒಟ್ಟು 20 ಬ್ಯಾರಕ್‌ಗಳಲ್ಲಿ 15ನ್ನು ಕೈದಿಗಳನ್ನು ಇಡಲು ಬಳಸಲಾಗುತ್ತಿದೆ. ಅದರಲ್ಲಿ ಒಟ್ಟು ಐದು ಸಾವಿರಕ್ಕೂ ಹೆಚ್ಚು ಕೈದಿಗಳಿದ್ದಾರೆ.

ಮೂಲಗಳ ಪ್ರಕಾರ ಪರಪ್ಪನ ಅಗ್ರಹಾರದಲ್ಲಿ ಪ್ರತಿಯೊಂದು ಬ್ಯಾರಕ್‌ನಲ್ಲಿ 300 ರಿಂದ 350 ಕೈದಿಗಳನ್ನು ಬಂಧಿಸಿಡಲಾಗುತ್ತಿದೆ. ಆದರೆ ಸಿಬ್ಬಂದಿಗಳ ಕೊರತೆಯಿರುವುದರಿಂದ ಇಡೀ ಬ್ಯಾರಕ್ ಅನ್ನು ನಿಭಾಯಿಸಲು ಒಬ್ಬ ಅಥವಾ ಇಬ್ಬರನ್ನು ಮಾತ್ರ ನೇಮಿಸಲಾಗಿದೆ. ರಾಷ್ಟ್ರೀಯ ಅಪರಾಧ ರೆಕಾರ್ಡ್ ವಿಭಾಗ ಬಿಡುಗಡೆಗೊಳಿಸಿರುವ 2023ರ ಅಂಕಿ-ಅಂಶದ ಪ್ರಕಾರ ಕರ್ನಾಟಕದಲ್ಲಿರುವ ಕಾರಾಗೃಹ ಇಲಾಖೆಗೆ ಒಟ್ಟು 4179 ಹುದ್ದೆಗಳು ಮಂಜೂ ರಾಗಿದ್ದರೆ, ಕಾರ್ಯನಿರ್ವಹಿಸುತ್ತಿರುವುದು ಮಾತ್ರ 3089 ಮಂದಿ.


ಅಂದರೆ ಸುಮಾರು 1090 ಹುದ್ದೆಗಳು ಖಾಲಿಯಿದೆ. ಅದೇ ಪರಪ್ಪನ ಅಗ್ರಹಾರ ಜೈಲಿಗೆ, 800 ಹುದ್ದೆ ಮಂಜೂರಾಗಿದ್ದು, ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಮಾತ್ರ 400 ಸಿಬ್ಬಂದಿಗಳ ಆಚೀಚೆ ಇದೆ. ಅಂದರೆ ಬರೋಬ್ಬರಿ ಶೇ.50ರಷ್ಟು ಹುದ್ದೆಗಳು ಖಾಲಿಯಿವೆ. ರಾಜ್ಯದ ಬಹುದೊಡ್ಡ ಕಾರಾಗೃಹ ಎನಿಸಿರುವ ಪರಪ್ಪನ ಅಗ್ರಹಾರದಲ್ಲಿ ಈ ಪ್ರಮಾಣದಲ್ಲಿ ಖಾಲಿ ಹುದ್ದೆಗಳಿದ್ದರೆ ನಿರ್ವಹಣೆ ಮಾಡುವುದಾದರೂ ಹೇಗೆ ಎನ್ನುವುದು ಕೆಳಹಂತದ ಸಿಬ್ಬಂದಿಯ ಪ್ರಶ್ನೆಯಾಗಿದೆ.

ಪರಪ್ಪನ ಅಗ್ರಹಾರದೊಳಗೆ ನಡೆಯುತ್ತಿರುವ ರಾಜಾತಿಥ್ಯ ವಿಷಯ ಇದೀಗ ರಾಷ್ಟ್ರೀಯ ಸುದ್ದಿಯಾಗಿದೆ. ಆದರೆ ಇದು ಕೇವಲ ಪರಪ್ಪನ ಅಗ್ರಹಾರಕ್ಕೆ ಸೀಮಿತವಾಗಿರುವ ಸಮಸ್ಯೆ ಅಲ್ಲ. ಜೈಲಿನೊಳಗೆ ನಡೆಯುತ್ತಿರುವ ಇಂಥ ವಿಷಯ ಬಹಿರಂಗವಾಗಬೇಕಿದ್ದರೆ, ಒಂದೋ ಅದು ಜೈಲಿನೊಳಗಿರುವ ಕೈದಿಗಳಿಂದ ಆಗಬೇಕು, ಇಲ್ಲವೇ ಜೈಲಿನ ಸಿಬ್ಬಂದಿಗಳೇ ಅದನ್ನು ಬಹಿರಂಗಪಡಿಸಬೇಕು.

ಇಲ್ಲದೇ ಹೋದರೆ, ಒಳಗೆ ನಡೆಯುವ ವಿಷಯ ಹೊರ ಬರುವುದಕ್ಕೆ ಅಸಾಧ್ಯ. ಹೀಗಿರುವಾಗ ಪರಪ್ಪನ ಅಗ್ರಹಾರದಲ್ಲಿ ಉಮೇಶ್ ರೆಡ್ಡಿ ಇರಲಿ, ಉಗ್ರನೇ ಇರಲಿ ಫೋನಲ್ಲಿ ಮಾತಾಡಿರುವ ಸ್ಪಷ್ಟ ವಿಡಿಯೋ ಬಹಿರಂಗವಾಗಿದೆ ಎನ್ನುವುದಾದರೆ, ಆ ವಿಡಿಯೋವನ್ನು ಮಾಡುವುದಕ್ಕೆ ಮತ್ತೊಂದು ಫೋನ್ ಬಳಕೆಯಾಗಿದೆ.

ಸದ್ಯ ಈ ಪ್ರಕರಣವನ್ನು ದರ್ಶನ್ ಆಪ್ತ ಧ್ವನೀರ್ ಇಂದ ವಿಡಿಯೋ ಬಹಿರಂಗವಾಗಿದೆ ಎಂದು ಹೇಳಿ, ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಆದರೆ ಆತನಿಗೆ ಈ ವಿಡಿಯೊ ಕೊಟ್ಟಿರುವುದು ಯಾರು? ರಾಜಾ ರೋಷವಾಗಿ ವಿಡಿಯೋ ಮಾಡಿಕೊಂಡರೂ ಅಪರಾಧಿಗಳು ಅದನ್ನು ನೋಡಿಕೊಂಡೂ ಸುಮ್ಮನಿದ್ದರು ಎನ್ನುವುದಾದರೆ, ಅವರಿಗೆ ವಿಡಿಯೋ ಮಾಡಿದ ವ್ಯಕ್ತಿಯ ಮೇಲೆ ನಂಬಿಕೆ ಎಷ್ಟಿರಬೇಕು? ಎನ್ನುವುದು ಹಲವರ ಪ್ರಶ್ನೆಯಾಗಿದೆ.

ಇನ್ನು, ಸದ್ಯ ಹಾಟ್ ಟಾಪಿಕ್ ಆಗಿರುವ ಪರಪ್ಪನ ಅಗ್ರಹಾರದ ರಾಜಾತಿಥ್ಯ ಪ್ರಕರಣ ಇನ್ನೆರಡು ದಿನಗಳಲ್ಲಿ ತಣ್ಣಗಾಗಲಿದೆ. ಈಗಾಗಲೇ ಇಬ್ಬರನ್ನು ಅಮಾನತು, ಕೆಲವರನ್ನು ವರ್ಗಾವಣೆ ಮಾಡುವ ಮೂಲಕ ಕಠಿಣ ಕ್ರಮ



ತೆಗೆದುಕೊಂಡಿದ್ದೇವೆ ಎಂದು ಸರಕಾರ ಹೇಳುತ್ತಿದೆ.

ವಿವಾದವಾಗಿದ್ದ ವಿಷಯವನ್ನು ತಣ್ಣಗಾಗಿಸಲು ಈ ಅಮಾನತು, ವರ್ಗಾವಣೆಯ ಶಿಕ್ಷೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಮುಂದಿನ ಕೆಲ ದಿನಗಳ ಕಾಲ ಜೈಲಿನಲ್ಲಿ ಕೆಲ ಕಟ್ಟುನಿಟ್ಟಿನ ಕ್ರಮವಿರುತ್ತದೆ ಎಂದು ಎಲ್ಲರೂ ಭಾವಿಸಿಕೊಂಡಿರುತ್ತಾರೆ.

ಮುಂದೊಂದು ದಿನ ಮತ್ತೊಂದು ವಿಡಿಯೋ, ಫೋಟೋ ವೈರಲ್ ಆದಾಗ ಮತ್ತೆ ಅದೇ ಗಲಾಟೆ, ವಿವಾದ, ಕಠಿಣ ಕ್ರಮದ ಎಚ್ಚರಿಕೆ ಹಾಗೂ ಕೆಲವೊಂದಷ್ಟು ಅಧಿಕಾರಿಗಳ ತಲೆದಂಡದ ಶಿಕ್ಷೆ. ಹಾಗೆ ನೋಡಿದರೆ, ಈ ರಾಜಾತಿಥ್ಯ ಪ್ರಕರಣವನ್ನೇ ಮುಂದಿಟ್ಟುಕೊಂಡು ದರ್ಶನ್‌ಗೆ ಹಾಸಿಗೆ, ದಿಂಬು ನೀಡಲು ಜೈಲ್ ಮ್ಯಾನ್ಯುಯಲ್ ಅನ್ನು ತೋರಿಸುತ್ತಿರುವ ಜೈಲಧಿಕಾರಿಗಳ ವಿರುದ್ಧ ಮತ್ತೊಮ್ಮೆ ದರ್ಶನ್ ಪರ ವಕೀಲರು ನ್ಯಾಯಾಲಯದ ಮೆಟ್ಟಿಲೇರಿದರೂ ಅಚ್ಚರಿಯಿಲ್ಲ.

ಈ ಕಾರಣಕ್ಕಾಗಿಯೇ ಧನ್ವೀರ್ ವಿಡಿಯೋಗಳನ್ನು ಲೀಕ್ ಮಾಡಿದ್ದಾರೆ ಎನ್ನುವ ಆರೋಪವೂ ಇದೆ. ಇನ್ನೊಂದೆಡೆ ಕಾರಾಗೃಹ ವಿಭಾಗಕ್ಕೆ ಎಡಿಜಿಪಿಯಾಗಿ ಬಿ.ದಯಾನಂದ್ ಅವರು ಬಂದ ಬಳಿಕ ಕೆಲವೊಂದಷ್ಟು ಕಠಿಣ ಕ್ರಮಗಳನ್ನು ಕೈಗೊಂಡಿದ್ದರು. ಇದರಿಂದ ಕೆಳಮಟ್ಟದಲ್ಲಿ ಅಧಿಕಾರಿಗಳಿಗೆ ಕೈಕಟ್ಟಿ ಹಾಕಿದಂತಾಗಿರುವ ಮಾತುಗಳೂ ಇದೆ. ಈ ಕಾರಣಕ್ಕೂ ಈ ವಿಡಿಯೋ ದಿಢೀರ್ ಎಂದು ಮಾಧ್ಯಮಗಳ ಮುಂದೆ ಪ್ರತ್ಯಕ್ಷವಾಗಿವೆ ಎನ್ನುವ ಗುಸುಗುಸು ಸಹ ಇದೆ.

ಒಟ್ಟಾರೆ ಪ್ರಕರಣದಲ್ಲಿ ಒಂದಂತೂ ನಿಜ, ಪರಪ್ಪನ ಅಗ್ರಹಾರ ಜೈಲಿನಲ್ಲಿ ನಡೆದಿದೆ ಎನ್ನಲಾಗುತ್ತಿರುವ ರಾಜಾತಿಥ್ಯ ಪ್ರಕರಣ ಇದೇ ಮೊದಲೂ ಅಲ್ಲ, ಕೊನೆಯೂ ಅಲ್ಲ. ಇಡೀ ವ್ಯವಸ್ಥೆ ಈ ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವುದರಿಂದ, ಸ್ವಚ್ಛಗೊಳಿಸುವುದು ಅಂದು ಕೊಂಡಷ್ಟು ಸುಲಭವೂ ಅಲ್ಲ ಎನ್ನುವುದು ವಾಸ್ತವ.

**- ರಂಜಿತ್ ಎಚ್** ಅಶ್ವತ್ಥ್

## ವ್ಯವಸ್ಥೆಯನ್ನು ಸರಿಪಡಿಸಲು ಸಾಧ್ಯವಾ....

- ವಾಸ್ತವದಲ್ಲಿ ನೋಡುವುದಾದರೆ, ಯಾವುದೇ ಸರಕಾರ ಅಧಿಕಾರದಲ್ಲಿದ್ದರೂ ಈ ವ್ಯವಸ್ಥೆಯನ್ನು ಸರಿಪಡಿಸಲು ಸಾಧ್ಯವಾಗುವುದಿಲ್ಲ.
- ವ್ಯವಸ್ಥೆಯನ್ನು ಸರಿಪಡಿಸದಿರುವುದಕ್ಕೆ ಭ್ರಷ್ಟ ವ್ಯವಸ್ಥೆ ಒಂದು ಕಾರಣವಾದರೆ, ಸಿಬ್ಬಂದಿಗಳ ಕೊರತೆ ಮತ್ತೊಂದು ಕಾರಣ ಎಂದರೆ ತಪ್ಪಾಗುವುದಿಲ್ಲ.
- ರಾಜ್ಯ, ಕೇಂದ್ರ ಸರಕಾರಗಳು ಕಾರಾಗೃಹಗಳ ಮೇಲಿನ ಒತ್ತಡವನ್ನು ನಿವಾರಿಸಲು ಹಲವು ಕ್ರಮಗಳನ್ನು ಕಾಗದದಲ್ಲಿ ವಹಿಸಿದೆ.
- ಹೊಸ ಕಾರಾಗೃಹ ನಿರ್ಮಾಣಕ್ಕೆ ಅನುದಾನವನ್ನು ನೀಡಿವೆ. ಆದರೆ ಈ ಎಲ್ಲಕ್ಕಿಂತ ಮುಖ್ಯವಾಗಿ ಬೇಕಿರುವ ಸಿಬ್ಬಂದಿಗಳನ್ನು ನೇಮಿಸಿಕೊಳ್ಳುವಲ್ಲಿ ಸರಕಾರಗಳು ವಿಫಲವಾಗುತ್ತಲೇ ಬಂದಿವೆ.
- ಸಚಿವ ಪರಮೇಶ್ವರ್ ಅವರು, ಹೊಸದಾಗಿ ನೇಮಿಸಿಕೊಳ್ಳಲು ಅನುಮತಿ ನೀಡಲಾಗಿದೆ ಎಂದು ಸೋಮವಾರದ ಸಭೆಯಲ್ಲಿ ಹೇಳಿದ್ದಾರೆ.
- ಆದರೆ ಶೇ.50ರಷ್ಟು ಹುದ್ದೆಗಳು ಖಾಲಿಯಿರುವಾಗ ಏಕಾಏಕಿ ನೇಮಕ ಹೇಗೆ ಸಾಧ್ಯ ಎನ್ನುವುದು ಹಲವರ ಪ್ರಶ್ನೆಯಾಗಿದೆ.

## 12-11-2025 ದಿನ ಭವಿಷ್ಯ



**ಮೇಷ:** ದ್ವೇಷ ಪ್ರೀತಿಗಿಂತ ಹೆಚ್ಚು ಶಕ್ತಿಶಾಲಿಯಾಗಿದ್ದು ನಿಮ್ಮ ದೇಹದ ಮೇಲೆ ಪ್ರಾಣಾಂತಿಕ ಪರಿಣಾಮ ಬೀರುವದರಿಂದ ನಿಮ್ಮ ದ್ವೇಷವನ್ನು ಸಾಯಿಸಲು ಒಂದು ಸಮರಸದ ಸ್ವಭಾವವನ್ನು ರೂಪಿಸಿಕೊಳ್ಳಿ. ದುಷ್ಟತೆಯು ಒಳಿತಿಗಿಂತ ಬೇಗ ವಿಜಯ ಸಾಧಿಸುತ್ತದೆಂದು ನೆನಪಿಡಿ. ನಿಮ್ಮ ತಾಯಿಯ ದುಂದುಗಾರಿಕೆಯನ್ನು ನೋಡಿ ನೀವು ಚಿಂತಿತರಾಗಬಹುದು.



**ವೃಷಭ:** ಅನಾವಶ್ಯಕವಾಗಿ ವಾದ ಮಾಡಿ ನಿಮ್ಮ ಶಕ್ತಿಯನ್ನು ವ್ಯರ್ಥ ಮಾಡಬೇಡಿ. ನೀವು ಒಂದು ವಾದದಿಂದ ಏನನ್ನೂ ಪಡೆಯದಿದ್ದರೂ ಏನಾದರೂ ಕಳೆದುಕೊಳ್ಳುತ್ತೀರೆಂದು ನೆನಪಿಟ್ಟುಕೊಳ್ಳಿ. ಇಂದು ಹಣದ ನಷ್ಟವು ಸಂಭವಿಸಬಹುದು. ಆದ್ದರಿಂದ ವಹಿವಾಟುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ನೀವು ಎಷ್ಟು ಜಾಗರೂಕರಾಗಿರುತ್ತೀರೋ ಅಷ್ಟೇ ನಿಮಗೆ ಉತ್ತಮವಾಗಿರುತ್ತದೆ.



**ಮಿಥುನ:** ಹೊರಾಂಗಣ ಚಟುವಟಿಕೆಗಳು ಇಂದು ದಣವು ಮತ್ತು ಒತ್ತಡ ತರುತ್ತವೆ. ನೀವು ಇಂದು ಗಣನೀಯ ಪ್ರಮಾಣದ ಹಣವನ್ನು ಸಹ ಹೊಂದಿರುತ್ತೀರಿ ಮತ್ತು ಅದರೊಂದಿಗೆ ಮನಸ್ಸಿನ ಶಾಂತಿ ಇರುತ್ತದೆ. ಯಾರಾದರೂ ನಿಮಗೆ ಹಾನಿ ಮಾಡಲು ಪ್ರಯತ್ನಿಸಬಹುದು ಬಲವಾದ ಶಕ್ತಿಗಳು ನಿಮ್ಮ ವಿರುದ್ಧ ಕೆಲಸ ಮಾಡುತ್ತಿರುತ್ತವೆ.



**ಕರ್ಕಾಟಕ:** ಹೊರಾಂಗಣ ಕ್ರೀಡೆ ನಿಮ್ಮನ್ನು ಸೆಳೆಯುತ್ತದೆ-ಧ್ಯಾನ ಮತ್ತು ಯೋಗ ಲಾಭ ತರುತ್ತವೆ. ಇಂದು ಹಣಕಾಸಿನ ಭಾಗವು ಉತ್ತಮವಾಗಿರುತ್ತದೆ ಆದರೆ ಇದರೊಂದಿಗೆ ನೀವು ನಿಮ್ಮ ಹಣವನ್ನು ವ್ಯರ್ಥವಾಗಿ ಖರ್ಚು ಮಾಡದಂತೆ ನೋಡಿಕೊಳ್ಳಬೇಕು. ಇಂದು ನೀವು ಸೀಮಿತ ತಾಳ್ಮೆ ಹೊಂದಿರುತ್ತೀರಿ...



**ಸಿಂಹ:** ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಇಂದು ಪರಿಹರಿಸಬಹುದು ಮತ್ತು ನೀವು ಹಣದಿಂದ ಲಾಭ ಪಡೆಯಬಹುದು. ಕುಟುಂಬ ಮತ್ತು ಸ್ನೇಹಿತರೊಂದಿಗೆ ಆಹ್ಲಾದಕರ ಸಮಯ ವೈಯಕ್ತಿಕ ವ್ಯವಹಾರಗಳು ನಿಯಂತ್ರಣದಲ್ಲಿರುತ್ತವೆ.



**ಕನ್ಯಾ:** ಸಂತಸದ ಪ್ರಯಾಣ ಮತ್ತು ಸಾಮಾಜಿಕ ಕಾರ್ಯಕ್ರಮಗಳು ನಿಮಗೆ ಆರಾಮ ಮತ್ತು ಸಂತೋಷ ತರುತ್ತದೆ. ಇಂದಿನ ದಿನ ಯಾರಿಗೂ ಸಾಲ ನೀಡಬೇಡಿ ಮತ್ತು ಕೊಡುವುದು ಅಗತ್ಯವಾಗಿದ್ದರೆ ಕೊಡುವವರಿಂದ ಅವರು ಯಾವಾಗ ಹಣವನ್ನು ಮರುಪಾವತಿ ಮಾಡುತ್ತಾರೆಂದು ಬರವಣಿಗೆಯಲ್ಲಿ ತೆಗೆದುಕೊಳ್ಳಿ ಭಾವನಾತ್ಮಕ ಅಪಾಯ ನಿಮ್ಮ ಪರವಾಗಿರುತ್ತದೆ.



**ತುಲಾ:** ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ಅನಿರೀಕ್ಷಿತ ಬಿಲ್‌ಗಳು ಹಣಕಾಸಿನ ಹೊರೆಯನ್ನು ಹೆಚ್ಚಿಸುತ್ತದೆ. ಮನೆಯ ಸದಸ್ಯರೊಬ್ಬರ ವರ್ತನೆಯಿಂದ ನೀವು ತೊಂದರೆಗೊಳಗಾಗಬಹುದು. ನೀವು ಅವರೊಂದಿಗೆ ಮಾತನಾಡುವ ಅಗತ್ಯವಿದೆ.



**ವೃಶ್ಚಿಕ:** ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು ಮತ್ತು ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಇಂದು ಪೂರ್ಣಗೊಳ್ಳಬಹುದು. ಇಂದು ನೀವು ಸೂಕ್ತವಾಗಿ ಉಳಿಸಲು ಸಾಧ್ಯವಾಗುತ್ತದೆ. ಸಮುದ್ರ ದಾಚೆಯ ಸಂಬಂಧಿಯಿಂದ ಒಂದು ಉಡುಗೊರೆ ನಿಮ್ಮನ್ನು ಸಂತೋಷಪಡಿಸುತ್ತದೆ.



**ಧನು:** ಸಾಧ್ಯವಾದರೆ ದೀರ್ಘ ಪ್ರಯಾಣವನ್ನು ತಪ್ಪಿಸಿ. ಏಕೆಂದರೆ ನೀವು ಪ್ರಯಾಣಿಸು ತುಂಬಾ ದುರ್ಬಲರಾಗಿದ್ದೀರಿ ಹಾಗೂ ಇದು ಮತ್ತಷ್ಟು ನಿಮ್ಮನ್ನು ದುರ್ಬಲಗೊಳಿಸುತ್ತದೆ. ಹಣವನ್ನು ಯೋಚಿಸದೆ ಮತ್ತು ಪರಿಗಣಿಸದೆ ಖರ್ಚುಮಾಡುವುದು, ನಿಮಗೆ ಎಷ್ಟು ನಷ್ಟ ಮಾಡಬಹುದು ಎಂಬುದು ಇಂದು ನಿಮಗೆ ಅರ್ಥವಾಗಬಹುದು. ಜನರ ಹಸ್ತಕ್ಷೇಪ ನಿಮ್ಮ ಸಂಬಂಧಕ್ಕೆ ಇಂದು ಧಕ್ಕೆ ತರಬಹುದು.



**ಮಕರ:** ರಕ್ತದೊತ್ತಡವಿರುವ ರೋಗಿಗಳು ತಮ್ಮ ರಕ್ತದೊತ್ತಡ ಕಡಿಮೆ ಮಾಡಲು ಮತ್ತು ಕೊಲೆಸ್ಟರಾಲ್ ನಿಯಂತ್ರಣದಲ್ಲಿರಿಸಲು ಕೆಂಪು ವೈನ್ ತೆಗೆದುಕೊಳ್ಳಬಹುದು. ಇದು ಅವರಿಗೆ ಮತ್ತಷ್ಟು ವಿಶ್ರಾಂತಿ ತರುತ್ತದೆ. ಇಂದು ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು ಮಕ್ಕಳು ನಿಮ್ಮ ನಿರೀಕ್ಷೆಗಳನ್ನು ಪೂರೈಸಲು ವಿಫಲವಾಗಿ ನಿಮಗೆ ನಿರಾಶೆಯುಂಟುಮಾಡಬಹುದು.



**ಕುಂಭ:** ಆಹಾರದ ಸ್ವಾದ ಉಪ್ಪಿನಿಂದ ಬರುವಂತೆ ಅತೃಪ್ತಿಯಿದ್ದಾಗಲೇ ನೀವು ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಇಂದು ಪೂರ್ಣಗೊಳ್ಳಬಹುದು. ಇಂದು ನೀವು ಸೂಕ್ತವಾಗಿ ಉಳಿಸಲು ಸಾಧ್ಯವಾಗುತ್ತದೆ. ಹೊಸ ಸಂಬಂಧಗಳು ದೀರ್ಘಾವಧಿಯದ್ದಾಗಿರುತ್ತವೆ ಮತ್ತು ಹೆಚ್ಚು ಅನುಕೂಲಕರವಾಗಿರುತ್ತವೆ.



**ಮೀನ:** ತುಂಬಾ ಪ್ರಯಾಣ ನಿಮಗೆ ದಣಿವಾಗಿಸುತ್ತದೆ ನೀವು ಜನರು ನಿಮ್ಮಿಂದ ಏನು ಬಯಸುತ್ತಾರೆಂದು ನಿಖರವಾಗಿ ತಿಳಿದಿರುವಂತೆ ತೋರುತ್ತದೆ-ಆದರೆ ಇಂದು ನಿಮ್ಮ ಖರ್ಚುಗಳಲ್ಲಿ ತುಂಬಾ ಉದಾರಿಯಾಗದಿರಲು ಪ್ರಯತ್ನಿಸಿ. ನಿಮ್ಮ ನೆರವು ಅಗತ್ಯವಿರುವ ಒಬ್ಬ ಸ್ನೇಹಿತರನ್ನು ಭೇಟಿ ಮಾಡಿ. ಪ್ರಣಯದ ಬಂಧಗಳು ನಿಮ್ಮ ಸಂತೋಷವನ್ನು ಆಸಕ್ತಿಕರವಾಗಿಸುತ್ತವೆ.

# ಮನಸ್ಸು ಸಂಪತ್ತು

ನಮ್ಮ ಬದುಕಿನ ಸಂಪತ್ತಿನ ಬಗ್ಗೆ ತಿಳಿದುಕೊಳ್ಳೋಣ. ನಮ್ಮ ಬದುಕಿನ ಸಂಪತ್ತೆ ಮನಸ್ಸು. ಮನಸ್ಸಿನ ಬಗ್ಗೆ ಚರ್ಚಿಸೋಣ. ಮನಸ್ಸು ಬಹಳ ಸೂಕ್ಷ್ಮವಾದ ಇಂದ್ರಿಯ. ಮನಸ್ಸಿನಲ್ಲಿ ಅನೇಕ ಶಕ್ತಿಗಳು ಇವೆ. ಬದುಕಿಗೆ ಬೇಕಾದ ಎಲ್ಲಾ ಶಕ್ತಿಗಳು ಮನಸ್ಸಿನಲ್ಲಿದೆ. ಮನಸ್ಸು ಎಷ್ಟು ಸೂಕ್ಷ್ಮ? ಅಂದರೆ ಇದನ್ನು ಗುರುತಿಸಲು ಅಸಾಧ್ಯ. ಮನಸ್ಸಿಗೆ ನಿಶ್ಚಿತ ರೂಪವಿಲ್ಲ, ಬಣ್ಣವಿಲ್ಲ ಅಂತಹದು. ಆದರೆ ಈ ಮನಸ್ಸು ಎಲ್ಲರಲ್ಲೂ ಇದೆ. ಬದುಕಿನ ಪ್ರತಿಯೊಂದು ವ್ಯವಹಾರ ನಡೆಯಬೇಕಾದರೆ ಮನಸ್ಸು ತುಂಬಾ ಅಗತ್ಯ. ಮನಸ್ಸು ಇಲ್ಲ, ಅನುಭವವಿಲ್ಲ. ಮನಸ್ಸು ಇಲ್ಲ, ಜ್ಞಾನ ಇಲ್ಲ. ಜ್ಞಾನ ಮತ್ತು ಅನುಭವದಿಂದ ಬದುಕು ಕಟ್ಟುತ್ತದೆ. ಯೋಚಿಸಿ, ಮನಸ್ಸಿನ ಮಹತ್ವ ಎಷ್ಟು ? ಮನಸ್ಸನ್ನು ನಮ್ಮಿಂದ ತೆಗೆದು ಇಟ್ಟರೆ, ಬದುಕೆ ಶೂನ್ಯವಾಗುತ್ತದೆ.

ಕಣ್ಣು ನೋಡುತ್ತದೆ ಅಂತ ನಾವು ಅನ್ನುತ್ತೇವೆ. ನಿಜವಾಗಿ ನೋಡುವುದು ನಮ್ಮ ಮನಸ್ಸೆ, ಕೇಳುವುದು ಮನಸ್ಸೆ, ಮುಟ್ಟುವುದು ಮನಸ್ಸೆ. ಇಂದ್ರಿಯಗಳು ಹೊರಗೆ ಇವುಗಳು ದ್ವಾರಗಳು ಇದ್ದಹಾಗೆ. ಮನಸ್ಸು ಎನ್ನುವುದು ಇಂತಹ ಒಂದು ಸುಂದರ ಆಂತರಿಕ ಸಾಧನ. ಆದ್ದರಿಂದ ಈ ಮನಸ್ಸನ್ನು ಚೆನ್ನಾಗಿ ಬಳಸಿದರೆ ಜೀವನ ಅಪ್ಯಾಯಮಾನವಾಗುತ್ತದೆ. ಇಂತಹ ಮನಸ್ಸಿನ ಬಗ್ಗೆ ತಿಳಿದುಕೊಳ್ಳಲು ಸಾವಿರಾರು ವರ್ಷದಿಂದ ಮನುಷ್ಯ ಕಷ್ಟ ಪಡುತ್ತಲೇ ಇದ್ದಾನೆ. ಇನ್ನೂ ಪಕ್ಕ ಸರಿಯಾಗಿ ತಿಳಿದುಕೊಳ್ಳಲು ಸಾಧ್ಯವಾಗಿಲ್ಲ. ನಮ್ಮಲ್ಲೇ ಇದೆ. ಚೆಂದವಾಗಿ ಕೆಲಸ ಮಾಡುತ್ತ ಇದೆ. ಆದರೆ ನಮಗೆ ಅದರ ಬಗ್ಗೆ ಪೂರ್ಣ ಗೊತ್ತಿಲ್ಲ. ನಿಸರ್ಗ ಮನಸ್ಸನ್ನ ರೂಪಿಸಿ ರಹಸ್ಯವಾಗಿ ಇಟ್ಟಿದೆ. ನಿಸರ್ಗ ಅಂತಹ ಸುಂದರ ಸಾಧನ ತಯಾರಿಸಿದೆ. ಮನುಷ್ಯ ಅಂತ ಕರೆದಿದ್ದು ಮನಸ್ಸು ಇದ್ದದರಿಂದ. ಯಂತ್ರ, ಮನುಷ್ಯ ಆಗುವುದಿಲ್ಲ. ಕಂಪ್ಯೂಟರ್ ಚೆನ್ನಾಗಿ ಕೆಲಸ ಮಾಡುತ್ತದೆ. ಕ್ಯಾಮರಗಳು ನೋಡುತ್ತವೆ. ಆದರೆ ಅವ್ಯಾವು ಅನುಭವಿಸುವುದಿಲ್ಲ. ಅನುಭವಿಸಲು ಮನಸ್ಸು ಬೇಕಾಗುತ್ತದೆ.

ಮನಸ್ಸಿನಲ್ಲಿ ಅನೇಕ ಭಾಗಗಳಿವೆ. ಅದರಲ್ಲಿ ಕೆಲವೊಂದನ್ನು ನೋಡೋಣ. ಅದರಲ್ಲಿ ಮೊದಲನೆಯದು ಅರಿಯುವ ಭಾಗ. ಎರಡನೆಯದು ಅನುಭವಿಸುವುದು, ಭಾವಿಸುವುದು. ಮೂರನೆಯದು ಬಯಸುವುದು. ಎಲ್ಲರ ಮನಸಿನಲ್ಲೂ ಈ ಮೂರು ಕಂಡು ಬರುತ್ತದೆ. ಪ್ರಪಂಚ ಎಂದರೆ ತಿಳಿದುಕೊಳ್ಳುವುದು, ಅನುಭವಿಸುವುದು ಮತ್ತು ಬಯಸುವುದು. ಇದಕ್ಕೆ ಜೀವನ. ಎಲ್ಲರೂ ಅಂದರೆ ಶ್ರೀಮಂತರು, ತೀರಾ ಬಡವರು ಮಾಡುವುದು ಇದೇ ಮೂರು ಕಾರ್ಯಗಳು. ಉದಾಹರಣೆಗೆ ಸೂರ್ಯನನ್ನು ನೋಡುವುದು (ತಿಳಿಯುವುದು). ಬಿಸಿಲನ್ನು ಅನುಭವಿಸುವುದು. ಚಳಿಗಾಲದಲ್ಲಿ ಶಾಖ ಬಯಸುವುದು. ಪ್ರತಿಯೊಂದು ಇಷ್ಟೇ. ಪ್ರತಿಯೊಂದರಲ್ಲೂ ಎರಡೆರಡು ಕಂಡುಬರುತ್ತದೆ. ಒಮ್ಮೆ ಸರಿಯಾಗಿ ತಿಳಿಯುವುದು, ಒಮ್ಮೆ ತಪ್ಪಾಗಿ ತಿಳಿಯುವುದು. ಒಮ್ಮೆ ಸುಖ ಅನುಭವಿಸುವುದು, ಒಮ್ಮೆ ದುಃಖ ಅನುಭವಿಸುವುದು. ಒಮ್ಮೆ ಬೇಕು ಅಂತ ಬಯಸುವುದು ಅಥವಾ ಒಮ್ಮೆ ಬೇಡ ಅಂತ ಬಯಸುವುದು. ಈ ಆರು ಕಾರ್ಯಗಳನ್ನು ಎಲ್ಲರೂ ಮಾಡುತ್ತಾರೆ. ಯಾವುದೇ ಸಂದರ್ಭದಲ್ಲೂ ಈ ಆರು ಕಾರ್ಯ ನಡೆಯುತ್ತಲೇ ಇರುತ್ತದೆ. ನಮ್ಮ ಋಷಿಮುನಿಗಳು ಇದನ್ನು ಕಂಡುಹಿಡಿದವರು. ಆಶ್ರಮದಲ್ಲಿ ಕುಳಿತು ಆಕಾಶ ನೋಡಿದರು. ಜಗತ್ತಿನ ಎಲ್ಲ ಕಡೆ ಕಣ್ಣು ಬಿಟ್ಟು ನೋಡಿದರು. ಕೊನೆಗೆ ಮನಸ್ಸಿನಲ್ಲಿ ಇಳಿದು, ಮನಸನ್ನು ಅರಿತರು. ಇದನ್ನೆಲ್ಲ ಕಂಡವರು. ಆದುದರಿಂದ ಇವರಿಗೆ ಋಷಿ ಎನ್ನುವರು. ಋಷಿ ಎಂದರೆ ಕಂಡವರು.

ನಾವು ವಸ್ತುಗಳನ್ನು ನೋಡುತ್ತೇವೆ. ಹಾಗಾಗಿ ನಾವು ಕಂಡವರೇ. ಆದರೆ ನಮಗೆ ಋಷಿ ಎನ್ನುವುದಿಲ್ಲ. ಅವರು ಕಾಣುವುದರ ಆಚೆ ಕಂಡವರು. ವಸ್ತುವಿನ ಹಿಂದೆ ಆಧಾರವಾಗಿರುವುದು ಅವರಿಗೆ ಕಾಣಿಸುತ್ತದೆ. ಋಷಿ ಎಂದರೆ ಸೂಕ್ಷ್ಮಜ್ಞಾನಿಗಳು. ಜೀವನದ ಅತ್ಯಂತ ದೊಡ್ಡ ಸಂಪತ್ತು ಮನಸ್ಸು. ಜೀವನದ ಅಂಗಳ ಮನಸ್ಸೇ. ಈ ಮನಸ್ಸನ್ನು ಅನುಭವದಿಂದ ತುಂಬಿಕೊಳ್ಳುತ್ತೇವೆ. ಜೀವನ ಶ್ರೀಮಂತವಾಗುವುದು, ಶ್ರೀಮಂತ ಅನುಭವದಿಂದ. ಜೀವನ ಬಡವಾಗುವುದು, ಬಡ ಅನುಭವದಿಂದ. ಯಾವ ಮನಸ್ಸು ಹೆಚ್ಚು ಅನುಭವಿಸುತ್ತದೆಯೊ ಆ ಜೀವನ ಹೆಚ್ಚು ಶ್ರೀಮಂತವಾಗುತ್ತದೆ. ಯಾವ ಮನಸ್ಸು ಕಡಿಮೆ ಅನುಭವಿಸುತ್ತದೆಯೊ ಆ ಜೀವನ ಬಡವಾಗುತ್ತದೆ. ನಮ್ಮ ಜೀವನ ಶ್ರೀಮಂತವಾಗುವುದು, ನಮ್ಮ ಜೀವನ ಬಡವಾಗುವುದು, ಅನುಭವದಿಂದ.

ಅನುಭವಿಸುವುದು ಮನಸ್ಸೆ. ಆದ್ದರಿಂದ ಮನಸ್ಸಿಗೆ ಅಷ್ಟು ಮಹತ್ವ. ಆದುದರಿಂದಲೇ ನಮ್ಮ ಮನಸ್ಸು ಸಂಪತ್ತು. ಈಗ ನಾವು ಯಾವುದನ್ನು ಸಂಪತ್ತು ಅಂತ ಹೇಳುತ್ತೇವೆಯೊ ಅದು ಅಲ್ಲ. ಉದಾಹರಣೆಗೆ. ಬಂಗಾರದ ಹೂವು. ಇದರ ಜೊತೆಗೆ ಸಾಮಾನ್ಯ ಹೂ ಇಟ್ಟು, ಆಯ್ಕೆಮಾಡಿಕೊಳ್ಳಿ ಎಂದರೆ, ಜನ ಬಂಗಾರದ ಹೂ ಆಯ್ಕೆ ಮಾಡಿಕೊಳ್ಳುತ್ತಾರೆ. ಯಾಕೆ ಅಂದರೆ ಬಂಗಾರ ಸಂಪತ್ತು ಅಂತ ತಿಳಿದುಕೊಂಡಿದ್ದೇವೆ. ಇದು ಸಂಪತ್ತು ಅಂತ ಹೇಳಿದ್ದು ನಮ್ಮ ಮನಸ್ಸು. ನಮ್ಮ ಮನಸ್ಸು ವಸ್ತುವಿಗೆ ಬೆಲೆ ಕಟ್ಟುತ್ತದೆ. ಆ ಬಳಿಕ ಹೇಳುತ್ತದೆ, ಇದರ ಬೆಲೆ ಹೆಚ್ಚು, ಇದರ ಬೆಲೆ ಕಡಿಮೆ ಎಂದು ಹೇಳುತ್ತದೆ. ಇವು ಮನಸ್ಸು ಕಟ್ಟಿದ ಬೆಲೆಯೆ ವಿನಹ, ವಸ್ತುವಿಗೆ ನಿಜವಾದ ಬೆಲೆ ಇಲ್ಲ. ಮನಸ್ಸು ತನಗೆ ಬೇಕಾದಂತೆ ಬೆಲೆ ಕಟ್ಟುತ್ತದೆ. ಒಂದೇ ರೀತಿ ಕಟ್ಟುವುದಿಲ್ಲ. ಒಮ್ಮೊಮ್ಮೆ ಹೂವಿಗೆ ಬೆಲೆ ಕಟ್ಟುತ್ತದೆ. ಒಮ್ಮೊಮ್ಮೆ ಚಿನ್ನಕ್ಕೆ ಬೆಲೆಕಟ್ಟುತ್ತದೆ. ಯಾವುದಕ್ಕೆ ಬೆಲೆ ಕಟ್ಟಬೇಕು ಅನ್ನುವುದು ಮನಸ್ಸಿನ ಕೈಯಲ್ಲಿದೆ.

ಒಂದು ಸಣ್ಣ ಮಗುವಿನ ಮುಂದೆ ಹಣ, ಗೊಂಬೆ ಇಟ್ಟರೆ, ಅದು ಗೊಂಬೆಯನ್ನೇ ಆಯ್ದುಕೊಳ್ಳುತ್ತದೆ. ಅದರ ದೃಷ್ಟಿಯಲ್ಲಿ ಹಣ ಬೆಲೆಯಲ್ಲ. ಗೊಂಬೆ ಬೆಲೆ. ಇಂತಹ ಮನಸ್ಸನ್ನು ಚೆಂದವಾಗಿ ಬಳಸಿಕೊಂಡರೆ ಎಲ್ಲವೂ ಸಂಪತ್ತು ಆಗುತ್ತದೆ. ಬದುಕು ಸಂಪತ್ ಭರಿತ ಆಗಬೇಕಾದರೆ ಮನಸ್ಸು ಶ್ರೀಮಂತವಾಗಬೇಕು. ಅಂತಹ ದೃಷ್ಟಿ ನಾವು ಪಡೆಯಬೇಕಾಗುತ್ತದೆ. ಅನುಭವಗಳನ್ನು ಶ್ರೀಮಂತ ಗೊಳಿಸುತ್ತಿರಬೇಕು. ಎಂತೆಂತಹದೊ



ಅನುಭವ ಆಗಬಾರದು. ಬೇಡದ ಅನುಭವವಾದರೆ, ಮನಸ್ಸು ಹೊಲಸಾಗುತ್ತದೆ. ಅನುಭವ ಕೆಟ್ಟದಾದರೆ, ಜೀವನ ಕೆಡುತ್ತದೆ. ಮನಸ್ಸು ಬದುಕಿನ ಅಂಗಳ. ಈ ಅಂಗಳದಲ್ಲಿ ಹೊಲಸು ಬೀಳುತ್ತದೆ. ಈ ಅಂಗಳದಲ್ಲಿ ಮುಳ್ಳು, ಕಲ್ಲಿನಂತಹ ಕಸ ಬೀಳುತ್ತದೆ. ಆಗ ಜೀವನ ಚಂದ ಆಗುವುದಿಲ್ಲ. ಜೀವನದ ಅಂಗಳದಲ್ಲಿ ಸಂತೋಷವಾಗಿರುವುದನ್ನು ಬೆಳೆಯಬೇಕು.


ಮನಸ್ಸು ಸಾಧನವು ಹೌದು. ಅನುಭವದ ತಾಣವೂ ಹೌದು. ಮನಸ್ಸನ್ನು ಅನುಭವದಿಂದ ತುಂಬಲು ಮನಸನ್ನೇ ಬಳಸಬೇಕು. ಇಂತಹ ಮನಸ್ಸನ್ನು ಪಡೆದ ನಾವು ಬಡವರಲ್ಲ. ಮನಸು ಮಾಡಿದರೆ ಇದೇ ಕ್ಷಣ ಸಿರಿವಂತರು. ಮನಸ್ಸು ಮಾಡಿದರೆ ಏನೊಂದು ಅಸಾಧ್ಯವಿಲ್ಲ. ಮನಸ್ಸು ಮಾಡಿದರೆ ತತ್ತಕ್ಷಣ ಬಡವ, ಶ್ರೀಮಂತನಾಗುತ್ತಾನೆ. ಇದರ ಅರ್ಥ ಹಣ ಸಂಗ್ರಹಿಸುವುದಲ್ಲ. ಯಾವುದು ಸಂಪತ್ತು? ಅದನ್ನು ತಿಳಿದುಕೊಳ್ಳುವುದು. ಅಷ್ಟೇ ಅಲ್ಲ ಯಾವುದನ್ನು ಸಂಪತ್ತು ಮಾಡಬೇಕು ಅನ್ನುವುದನ್ನು ತಿಳಿದುಕೊಳ್ಳುವುದು. ವಸ್ತುಗಳನ್ನು ಅದ್ಭುತ ಅಂತ ನೋಡಿದರೆ, ಅದೇ ಸಂಪತ್ತು. ಇದೇನು ಮಹಾ ಅಂತ ನೋಡಿದರೆ ಬಡವ. ಇರುವ ಗುಡಿಸಲನ್ನು ಅದ್ಭುತ ಅಂತ ನೋಡಿದರೆ ಅದೇ ಅರಮನೆ. ಇದೇನಿದು ಅಂದರೆ ಗುಡಿಸಲು. ಇದು ನಮ್ಮ ಮನಸ್ಸಿನ ಹಾಗೆ ಇದೆ. ನಮ್ಮ ಮನೆಯವರಿಗೆ ಎಷ್ಟು ಚಂದ ಇದ್ದಾರೆ ಎಂದರೆ ಅದೇ ಸ್ವರ್ಗ. ಅದು ಬಿಟ್ಟು ಒಬ್ಬರಿಗೊಬ್ಬರು ಹೊಂದಾಣಿಕೆ ಇಲ್ಲ ಅಂದರೆ ಅದೇ ನರಕ. ಅಂದರೆ ಯೋಚಿಸಿ ಮನೆ ಕಟ್ಟುವುದು ಯಾವುದು?.

ವಿದೇಶದ ತತ್ವಜ್ಞಾನಿ ಹೇಳುತ್ತಾನೆ ಕಟ್ಟಡಗಳನ್ನು ಇಟ್ಟಿಗೆ ಮತ್ತು ಸಿಮೆಂಟಿನಿಂದ ಕಟ್ಟುತ್ತಾರೆ. ಮನೆಯನ್ನು ಮಧುರ, ಪ್ರೇಮದ ಮನದಿಂದ ಕಟ್ಟಬೇಕಾಗುತ್ತದೆ. ದೊಡ್ಡ ಬಂಗಲೆಯಲ್ಲಿದ್ದರೆ ಮನೆ ಕಟ್ಟಿದಂತೆ ಆಗುವುದಿಲ್ಲ. ಅದನ್ನು ಯಾರಾದರೂ ಕಟ್ಟಬಹುದು. ಯಾರಿಂದಲಾದರೂ ಕಟ್ಟಿಸಬಹುದು. ಎಲ್ಲಾದರೂ ಸಿಗುತ್ತದೆ. ಕಟ್ಟಡ ಕಟ್ಟುವುದು ದೊಡ್ಡದಲ್ಲ. ಮನೆ ಕಟ್ಟುವುದು ದೊಡ್ಡದು. ಮಧುರ, ಸವಿಯಾದ ಪ್ರೇಮದ ಮನಸ್ಸಿನಿಂದ ಕಟ್ಟಿದ ಮನೆ, ಮನೆಯಾಗುತ್ತದೆ. ಕಟ್ಟಡಕ್ಕೆ ಬೆಲೆ ಕಟ್ಟಬಹುದು. ಮನೆಗೆ ಬೆಲೆ ಕಟ್ಟಲು ಆಗುವುದಿಲ್ಲ. ಯಾಕೆಂದರೆ ಅದು ಪ್ರೇಮ ಭಾವದಿಂದ ಕಟ್ಟಿರುತ್ತೇವೆ. ಭಾವಕ್ಕೆ ಬೆಲೆಕಟ್ಟಲು ಆಗುವುದಿಲ್ಲ. ಮಧುರ ಭಾವದಿಂದ ಮನೆ ಕಟ್ಟದಿದ್ದರೆ ಅವರು ಕಟ್ಟಡದಲ್ಲಿ ವಾಸವಿದ್ದಾರೆ ಅನ್ನಬೇಕು. ನಾವೆಲ್ಲ ಬಿಲ್ಡಿಂಗ್ ಕಟ್ಟುತ್ತೇವೆ. ಮನೆ ತೋರಿಸಲು ಸ್ನೇಹಿತರನ್ನು ಕರೆಯುತೇವೆ. ಆಗ ಮನೆಯವರು ಇವರನ್ನು ಯಾಕೆ ಕರೆತಂದೆ? ಅಂದರೆ, ಕರೆ ತಂದವರ ಬಗ್ಗೆ ಅಸಹನೆ ತೋರಿದರೆ, ಅದು ಮನೆ ಹೇಗಾಗುತ್ತದೆ?. ಅದು ಕಟ್ಟಡವಾಗುತ್ತದೆ. ಆತ ಬಂದವರಿಗೆ ಕಟ್ಟಡ ತೋರಿಸುತ್ತಾನೆ ವಿನಃ ಮನೆಯವರನ್ನು ತೋರಿಸುವುದಿಲ್ಲ. ಯಾಕೆಂದರೆ ಆತ ಮನೆ ಕಟ್ಟಿಲ್ಲ. ಜನ ವಾಸವಿದ್ದರೆ ಮನೆಯಲ್ಲ. ಮಂದಿಯಲ್ಲಿ ಆತ್ಮೀಯತೆ ಇದ್ದರೆ ಮನೆ. ಆತ್ಮೀಯತೆ ಇಲ್ಲದ ಭಾರಿ ಮನೆ ಕಟ್ಟಿದರು ಅವರು ಅಸಮಾಧಾನಗಳಾಗಿರುತ್ತಾರೆ. ಇದನ್ನೆಲ್ಲ ಮಾಡುವುದು ಮನಸ್ಸು. ಇದು ಭಾರತೀಯ ಋಷಿಗಳ ಮನಶಾಸ್ತ್ರದ ದೃಷ್ಟಿಕೋನ.

ಮನಸ್ಸನ್ನು ಬಳಸಿ ಚೆಂದಾಗಿರಬೇಕು. ನಮ್ಮನ್ನು ಶ್ರೀಮಂತ ಮಾಡಿಕೊಳ್ಳುವುದು ನಾವೇ, ಬಡವ ಮಾಡಿಕೊಳ್ಳುವವರು ನಾವೇ. ಬಡವ, ಶ್ರೀಮಂತ ಮಾಡುವುದು ನಮ್ಮ ಮನಸ್ಸೆ. ಅದಕ್ಕೆ ನಾವು ಎಲ್ಲವನ್ನು ಅದ್ಭುತ ಅಂತ ನೋಡುವ ದೃಷ್ಟಿ ಬೆಳೆಸಿಕೊಳ್ಳಬೇಕು. ಒಳ್ಳೆಯದು ಅಂತ ನೋಡಬೇಕು. ಪ್ರೀತಿಯಿಂದ ನೋಡಬೇಕು. ಆ ಪ್ರೀತಿಯೇ ಸಂತೋಷಕ್ಕೆ ಕಾರಣ. ಆ ಸಂತೋಷವೇ ಅನುಭವ. ಆ ಸಂತೋಷ ಮೂಡುವುದು ಮನಸ್ಸಿನಲ್ಲಿ. ಹಾಗಾಗಿ ತಿಳಿಯುತ್ತೆ ಮಕ್ಕಳೇ ಮನಸ್ಸು ಹೇಗೆ ಸಂಪತ್ತು? ಎಂದು.

**- ಎಂ.ಪಿ. ಜ್ಞಾನೇಶ್,** ಮಂಗಳೂರು

# ಕನ್ನಡ ಸಾಹಿತ್ಯ: ಶ್ರೀಸಾಮಾನ್ಯ ಮತ್ತು ಗುಂಪುಗಾರಿಕೆ



» **ತಾವು ಬರೆದ ಪುಸ್ತಕಗಳನ್ನು ಸಾರ್ವಜನಿಕ ಬಸ್ಸಿನಲ್ಲಿ ಅತಿ ಕಡಿಮೆ ಬೆಲೆಗೆ ಜನರಿಗೆ ನೀಡುತ್ತಿದ್ದರು. ಕಾಡಿಗೆ ತೆರಳಿ ಗಿರಿಜನರೊಂದಿಗೆ ಕಾಲ ಕಳೆಯುತ್ತಿದ್ದರು. ನಿವೃತ್ತಿಯ ನಂತರವೂ ಹತ್ತಾರು ರೈತರನ್ನು ಭೇಟಿ ಮಾಡುವಿಕೆ, ಸಂತೆಗೆ ಹೋಗಿ ಸಂತನಂತೆ ಸುತ್ತಾಡಿ ಮತ್ತಷ್ಟು ಕಲಿಯುವಿಕೆಯಲ್ಲಿ ತೊಡಗುತ್ತಿದ್ದರು.**

ಖ್ಯಾತ ಸಾಹಿತಿ ಬಿ.ಎಂ.ಶ್ರೀಕಂಠಯ್ಯ ಅವರು 1911ರಲ್ಲಿ, ಕನ್ನಡ ಮಾತು ತಲೆ ಎತ್ತುವ ಬಗೆ ಎಂಬ ವಿಷಯದ ಕುರಿತು ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಉಪನ್ಯಾಸ ನೀಡಿದರು. ಅದರ ಪ್ರತಿ ಸಾಲೂ ಇಂದಿಗೂ ಪ್ರಸ್ತುತವಾಗಿದೆ. ಏಕೆಂದರೆ, ಸಂಸ್ಕೃತ, ಇಂಗ್ಲಿಷ್ ಮತ್ತು ದೇಶಭಾಷೆಗಳನ್ನು, ಅವುಗಳ ಸಾಹಿತ್ಯವನ್ನು ಕಲಿಸುವ ಜವಾಬ್ದಾರಿಯು ವಿಶ್ವವಿದ್ಯಾಲಯಗಳ ಪಂಡಿತರ ಮೇಲಿದೆ; ಇವನ್ನು ಉಳಿಸಿಕೊಂಡು ಹೋಗುವ ತೇಜಸ್ಸು ಜನರಲ್ಲಿದೆ ಎಂದು ತಿಳಿಸಿದ್ದ ಬಿಎಂಶ್ರೀ, ಈ ನಿಟ್ಟಿನಲ್ಲಿ ಸರಿಯಾದ ಶ್ರದ್ಧೆ ಕಾಣದಿರುವುದನ್ನು ಗುರುತಿಸಿದ್ದರು.

ಈ ವಿಚಾರವನ್ನು ವರ್ತಮಾನಕ್ಕೆ ಅನ್ವಯಿಸಿ ಚರ್ಚಿಸುತ್ತಿದ್ದೇನೆ. ಈ ಭಾಷೆಗಳ ಪರಿಧಿ ಹಿಡಿದು ನೂರಾರು ಗುಂಪುಗಳಾಗಿ ಹೋಗಿರುವ ಕನ್ನಡದ ಸ್ವಯಂ-ಪಂಡಿತರು ಯಾರ ಜತೆಯಲ್ಲಿ ಮಾತನಾಡುತ್ತಿದ್ದಾರೆ ಎಂಬುದೇ ತಿಳಿಯುತ್ತಿಲ್ಲ. ಸಾಹಿತ್ಯ ಸಮ್ಮೇಳನಗಳ ಹೆಸರಿನಲ್ಲಿ ಕೋಟಿಗಟ್ಟಲೆ ಹಣ ವ್ಯಯವಾಗುತ್ತಿದೆ, ಇದು ಶ್ರೀಸಾಮಾನ್ಯರ ಹಣ.

ಆದರೆ ಅಲ್ಲಿ ಐಡಿ ಧರಿಸಿ ವಕ್ತಾರರಾಗುವ ಒಬ್ಬರಲ್ಲೂ ಇದರ ಕುರಿತಾದ ಎಚ್ಚರವಿಲ್ಲದಿರುವುದು ಸ್ಪಷ್ಟವಾಗಿ ಕಾಣುತ್ತದೆ. ಎರಡು ವರ್ಗದವರ ಹಪಾಹಪಿಗಳು ವೇದಿಕೆಗಳಲ್ಲಿ ಚೀಟಿ ಕೊಟ್ಟು ತೋಡಿಕೊಳ್ಳುವ ಹಂತದವರೆಗೂ ಹೋಗುತ್ತವೆ.

ಹಾಗೆ ನೋಡಿದರೆ, ಒಂದು ಕಾಲಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ನಿಜಾರ್ಥದ ಅಧ್ವರ್ಯು ತನದಲ್ಲಿ ನಡೆಯುತ್ತಿದ್ದ ಸಾಹಿತ್ಯ ಸಮ್ಮೇಳನಗಳು ಒಂದು ಶ್ರೇಷ್ಠಮಾಗವನ್ನು ನಿರ್ಮಿಸಿದ್ದವು. ಆ ಮಾರ್ಗವು ಜನಸಾಮಾನ್ಯರಿಂದ ದೂರವಾಗಿ, ಸರಕಾರದ ಹಣವನ್ನು ಖರ್ಚು ಮಾಡಿಸುವ ಜಾತ್ರೆಗಳಾಗಿ ಬದಲಾದ ಮೇಲೆ ಪ್ರತ್ಯೇಕ ಸಮ್ಮೇಳನಗಳು ಪ್ರಾರಂಭವಾದವು.

ಆದರೆ, ಈ ಪ್ರತ್ಯೇಕ ಸಮ್ಮೇಳನಗಳಾದರೂ ದುಂದುವೆಚ್ಚವಿಲ್ಲದೆ ಜನಸಾಮಾನ್ಯರ ಬಳಿಗೆ ಹೋಗಿವೆಯಾ ಎಂಬುದನ್ನು ಹೇಗೆ ತಿಳಿಯುವುದು? ಆ ಮಾದರಿಗಳಿದ್ದರೆ ಪ್ರತ್ಯೇಕತೆಗೂ ಅರ್ಥವಿರುತ್ತಿತ್ತು. ಒಟ್ಟಾರೆ ಹೇಳುವುದಾದರೆ, ಒಂದು ಪತ್ರಿಕೆಯನ್ನು ಓದಿ ಸುಖಿಸುವಷ್ಟೂ ನೆಮ್ಮದಿಯು ಈ ಸಮ್ಮೇಳನಗಳಲ್ಲಿ ಸಿಗುತ್ತಿಲ್ಲ. ಈ ಸಾಲನ್ನು ನಮ್ಮ ವಿದ್ವಾಂಸರು ಓದಿದರೆ, ಇದು ಅವಕಾಶವಂಚಿತರ ಹಪಾಹಪಿ ಎಂದು ಸುಮ್ಮನಾಗುತ್ತಾರೆಯೇ ಹೊರತು, ಪರಿಹಾರವನ್ನು ಆಲೋಚಿಸಲಾರರು.

ಇಲ್ಲೊಂದು ಜನೋಪಯೋಗಿ ಕಾರ್ಯ ನಡೆಯುತ್ತಿದೆ. ಅದುವೇ- ಪುಸ್ತಕ ಸಂತೆ. ಒಂದಿಷ್ಟು ಪುಸ್ತಕ ಪ್ರಕಾಶಕರು/ವ್ಯಾಪಾರಿಗಳು ಹೊತ್ತು ತಂದು ರಿಯಾಯಿತಿಯಲ್ಲಿ ನೀಡುವ ಪುಸ್ತಕಗಳನ್ನು, ಸಾಕಷ್ಟು ಜನರು ಅಭಿಮಾನ-ಅವಶ್ಯಕತೆ-ಅರಿವಿನ ಹಸಿವು ಮುಂತಾದ ಕಾರಣಗಳಿಂದ ಕೊಳ್ಳುತ್ತಾರೆ. ಈ ಬೆಳವಣಿಗೆಯಿಂದ ಹಲವು ನೆಲೆಗಳಲ್ಲಿ ಪ್ರಯೋಜನವಾಗುತ್ತಿದೆ-ಪ್ರಕಾಶಕರಿಗೆ/ಮಾರಾಟಗಾರರಿಗೆ ಇಂಥ ಸಮ್ಮೇಳನಗಳಿಂದ ವ್ಯಾಪಾರವಾಗುತ್ತಿದೆ, ತನ್ಮೂಲಕ ಅವರ ಉದ್ಯಮ/ವ್ಯವಹಾರದ ವಿಸ್ತರಣೆಯೂ ಆಗುತ್ತದೆ; ಇಂಥ ಸಮ್ಮೇಳನಗಳಿಗೆ ಊಟ-ತಿಂಡಿ ತಯಾರಿಸುವಿಕೆ, ಬಡಿಸುವಿಕೆ, ಗುಡಿಸುವಿಕೆ ಮಾಡುವ ಕಾರ್ಯಪಟುಗಳ ದುಡಿಮೆಗೊಂದು ಆಸರೆಯಾಗುತ್ತದೆ.

ಈಗ ಪ್ರಾರಂಭದ ವಿಚಾರಕ್ಕೆ ಬರೋಣ. ಕನ್ನಡ ಮಾತು ತಲೆ ಎತ್ತುವ ಬಗೆಗಳು ಬದಲಾಗಿವೆ. ಭಾಷೆ, ಜನಾಂಗ, ಧರ್ಮ, ಇವುಗಳ ನಡುವೆ ಸುಳಿವ ಆತ್ಮಗಳು ಮೊದಲಾದಂತೆ ಪ್ರತ್ಯೇಕ ಗುಂಪುಗಳಾಗಿವೆ. ಆದರೆ, ಕಿವಿ ತೆರೆದು ಕೇಳಿ, ಎದೆಯುಬ್ಬಿಸಿ ಸಾಗುತ್ತಿದ್ದ ಶ್ರೀಸಾಮಾನ್ಯರು ಪ್ರತ್ಯೇಕವಾಗಿ ಉಳಿದಿದ್ದಾರೆ. ಇವರು ಕೇಳಿದರೆ ನಾಲ್ಕು ಕಾಸು ಕೊಡಬಲ್ಲರು, ಆದರೆ ಇವರಿಗೆ ಈ ಸಮ್ಮೇಳನಗಳ ಸಾರ, ವಿಚಾರ, ಸರ್ವೋದ್ಧಾರ ಸಂಸ್ಕಾರಗಳು ಬೇಕಿಲ್ಲ.

ಅದಕ್ಕೆ ಬೇರೆ ಬೇರೆ ಲೌಕಿಕ ಕಾರಣಗಳೂ ಇರಬಹುದು ಎನ್ನಿ... ಹಿಂದೆಲ್ಲಾ ಒಬ್ಬ ಕಾಲೇಜು ಮೇಷ್ಟ್ರು ಪಾಠ ಮಾಡುವಾಗ ವಿದ್ಯಾರ್ಥಿಗಳೊಂದಿಗೆ ತಮ್ಮ ಮಾತು-ಬರಹಗಳನ್ನು ಹಂಚಿಕೊಳ್ಳುತ್ತಿದ್ದುದರ ಜತೆಗೆ, ತರಗತಿ ಮುಗಿದ ಮೇಲೆ ಲೋಕಜ್ಞಾನವನ್ನೂ ನೀಡುತ್ತಿದ್ದರು. ರಜೆಯಲ್ಲಿ ತೋಟ-ಗದ್ದೆ, ಕಾಡು-ಮೇಡುಗಳನ್ನು ಸುತ್ತಿಸುತ್ತಿದ್ದರು.

ತಾವು ಬರೆದ ಪುಸ್ತಕಗಳನ್ನು ಸಾರ್ವಜನಿಕ ಬಸ್ಸಿನಲ್ಲಿ ಅತಿ ಕಡಿಮೆ ಬೆಲೆಗೆ ಜನರಿಗೆ ನೀಡುತ್ತಿದ್ದರು. ಕಾಡಿಗೆ ತೆರಳಿ ಗಿರಿಜನರೊಂದಿಗೆ ಕಾಲ ಕಳೆಯುತ್ತಿದ್ದರು. ನಿವೃತ್ತಿಯ ನಂತರವೂ ಹತ್ತಾರು ರೈತರನ್ನು ಭೇಟಿ ಮಾಡುವಿಕೆ, ಸಂತೆಗೆ ಹೋಗಿ ಸಂತನಂತೆ ಸುತ್ತಾಡಿ ಮತ್ತಷ್ಟು ಕಲಿಯುವಿಕೆಯಲ್ಲಿ ತೊಡಗುತ್ತಿದ್ದರು.

ಇವನ್ನೆಲ್ಲಾ ನೋಡಿದರೆ, ಬದುಕಿನ ಸಮ್ಮೇಳನಗಳು ಗುಂಪು ಕಳಚಿ, ಈ ಮಾರ್ಗದಲ್ಲಿ ಪ್ರತ್ಯೇಕವಾಗುವುದೇ ಮೇಲು ಎನಿಸುತ್ತದೆ. ಅಷ್ಟಲ್ಲದೆಯೇ ಬಸವಣ್ಣನವರು, ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರ ಗೋಷ್ಠಿ ಎಂದು ಹೇಳಿದ್ದಾರೆಯೇ? ಈ ಕುರಿತು ಆಲೋಚಿಸಬೇಕಿದೆ...

**- ಡಾ.ರವಿಶಂಕರ್ ಎ.ಕೆ.,** ಬೆಂಗಳೂರು

